ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೧ ಜನವರಿ, ೨೦೦೧ ಸಂಚಿಕೆ ೬

ಹೊಸ ವರ್ಷ ಹುತಾತ್ಮರ ತ್ಯಾಗ ಮರೆಯದಿರಲಿ

★

ಕಪ್ಪು ಹಣದಿಂದ ಮುಕ್ತಿಯೆಂತು?

★

ಜಾತ್ಯತೀತರು ಮತ್ತು ರಾಷ್ಟ್ರೀಯ ನೀತಿಸಂಹಿತೆ

★

ತುಂಗ – ಭದ್ರೆಯರು ಉಳಿಯುವರೊ – ಅಳಿಯುವರೊ?

ಈ ಸಂಚಿಕೆಯಲ್ಲಿ ★

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೧ ಸಂಚಿಕೆ : ೬

ಜನವರಿ ೨೦೦೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

....

ಚಂದಾ ವಿವರ :
ವಾರ್ಷಿಕ : ರೂ. ೧೦೦/-
ಅರ್ಧವಾರ್ಷಿಕ : ರೂ. ೫೦/-
ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :
ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧.
ದೂರವಾಣಿ : ೦೮೨೩೬/೫೮೭೫೪

ಹೌದು; ನಾನು ನಾನೇ.
ಒಬ್ಬನ ಬದುಕು
ಮತ್ತೊಬ್ಬನ ಪ್ರತಿಕೃತಿಯಲ್ಲ.
ಅನುಕರಣೆ ಮಾತ್ರದಿಂದಲೇ
ಒಳಗಿನ ಮೊಳಕೆ ಚಿಗುರುವುದಿಲ್ಲ.
ಬೀಜಕ್ಕೆ ಬೇಕು ಫಲವತ್ತಾದ ನೆಲ.
ಬಲಿವ ವರೆಗೂ ರಕ್ಷಣೆಯ ಛಲ.
ಇಂಥ ಮರುಧರೆಯಲ್ಲಿ
ಹುಡುಕುವುದೆಂತು ತಂಪು ನೆಲವ?
ಹಾಗೇನಾದರೂ ಸಿಕ್ಕಿ, ಚಿಗುರು ಕತ್ತೆತ್ತಿದರೆ
ದನಕುರಿಗಳ ಹಾವಳಿ,ನೆಕ್ಕಾಳ್ವು ಬುಡಸಹಿತ
ಆದರೂ ಒಳಗಿನ ಛಲ ಪುಟ್ಟಿದರೆ
ಬೆಳೆಯಬಹುದು ಒಂದಿಷ್ಟು
ಕುರುಚಲಾಗಿ ಮಾತ್ರ.
ಸುತ್ತೆಲ್ಲ ಹಸನಾಗಿ
ಒಳಗಿನಹುಮ್ಮಸ್ಸಿಗೆ ಕುಮ್ಮಕ್ಕಿರದಿದ್ದರೆ
ಎಂಥ ಬೀಜದ ಕನಸೂ ಅರಳುವುದಿಲ್ಲ;
ಭ್ರಾಂತಿಯ ಬಡಬಡಿಕೆಗೆ ಅರ್ಥವಿಲ್ಲ.

— ಟಿ. ಎಂ. ಷಡಕ್ಷರಿ

ಜನಪದ ಸಂಗತಿ.................

ರಾಜಕಾರಣಿಗಳ ವಿಸಂಗತಿಗಳು ಮತ್ತು ಅಸಂಗತಿಗಳು ಕಡಿಮೆಯಾಗುವುದರ ಬದಲು ಹೆಚ್ಚಾಗುತ್ತಿರುವುದು ನಮ್ಮ ದೇಶದ ದುರ್ದೈವ. ಇವರನ್ನು ಅನುಸರಿಸಿ ಅಧಿಕಾರಿಗಳು. ಹೀಗೆ ರಾಜಕಾರಣಿಗಳು ಮತ್ತು ಅಧಿಕಾರಿಗಳ ಸ್ವೇಚ್ಛಾ ಜೀವನವು ದೇಶದ ಜೀವನಕ್ಕೆ ಬಡಿದ ಕ್ಯಾನ್ಸರ್ ಕಾಯಿಲೆಯಂತಾಗಿದೆ. ಇದಕ್ಕೆ ಉದಾಹರಣೆಯನ್ನಾಗಿ ಸಾವಿರಾರು ಘಟನೆಗಳನ್ನು ಕೊಡಬಹುದು. ಈಗ ಸಧ್ಯಕ್ಕೆ ಬಹಳ ಇತ್ತೀಚೆಗೆ ನಡೆದಿರುವುದನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗಿದೆ.

ಮೊದಲನೆಯ ಅಸಂಗತ ಸಂಗತಿ ಏನೆಂದರೆ ನಮ್ಮ ದೇಶದ ಪ್ರಧಾನಿಯವರ ಜನ್ಮ ದಿನಾಚರಣೆ ಕುರಿತಾದುದು. ಅವರು ತಮ್ಮ ೭೬ ನೇ ವರ್ಷದ ಜನ್ಮ ದಿನಾಚರಣೆಯನ್ನು ಆಚರಿಸಿದರು. ಇದು ಅವರ ಸ್ವಂತ ಮತ್ತು ಖಾಸಗಿ ವಿಷಯ. ಆದರೆ ಆ ದಿನವನ್ನು ಅವರು ದೇಶದ ಕಡುಬಡತನದಲ್ಲಿರುವ ಪ್ರತಿಯೊಂದು ಕುಟುಂಬಕ್ಕೆ ಪ್ರತಿ ತಿಂಗಳು ೨೫ ಕೆ.ಜಿ. ಅಕ್ಕಿಯನ್ನು ಕೇಜಿಗೆ ಮೂರು ರೂಪಾಯಿಗಳಂತೆ ಕೊಡುವ ೨೫೦೦೦ಕೋಟಿ ರೂಪಾಯಿ ಬೆಲೆ ಬಾಳುವ ಯೋಜನೆಯನ್ನು ಘೋಷಿಸಿ ಆದರ ಮಾರನೇ ದಿನವೇ ಕೇರಳಕ್ಕೆ ಬಹಳ ದುಬಾರಿ ಖರ್ಚಿನ ಹತ್ತು ದಿನಗಳ ವಿಶ್ರಾಂತಿಗಾಗಿ ತಮ್ಮ ಬಂಧುಗಳೊಂದಿಗೆ ಹೋಗಿದ್ದಾರೆ. ಇಲ್ಲಿ ನಮ್ಮ ಮುಂದೆ ಎದುರಾಗುವ ಪ್ರಶ್ನೆ ಬಡವರಿಗೆ ಸಂಬಂಧಿಸಿದ ಈ ಯೋಜನೆಯನ್ನು ಜಾರಿಗೆ ತರುವುದೂ ಮತ್ತು ಅವರ ಜನ್ಮ ದಿನಾಚರಣೆಗೂ ಏನು ಸಂಬಂಧ ? ಈ ಯೋಜನೆಗೆ ಬೇಕಾದ ಹಣ ದೇಶದ್ದು ಅಥವಾ ಸರಕಾರದ್ದು ಮತ್ತು ಈ ಯೋಜನೆಯನ್ನು ಜಾರಿಗೆ ತರುವವರು ಸರಕಾರದ ಆದಾಯದಲ್ಲಿ ಶೇಕಡಾ ೭೫ ರಷ್ಟು ಸಂಪನ್ಮೂಲವನ್ನು ತಮ್ಮ ಸಂಬಳಕ್ಕಾಗಿಯೇ ಉಪಯೋಗಿಸಿ ಕೊಳ್ಳುವ ಅಧಿಕಾರಿಶಾಹಿಗಳು ಅಲ್ಲದೆ, ಈ ಯೋಜನೆಗೆ ಬಿಡುಗಡೆಯಾಗಲಿರುವ ಅಕ್ಕಿ ಮತ್ತು ಗೋಧಿ ದೇಶದ ವಿವಿಧ ಗೋದಾಮುಗಳಲ್ಲಿ ತುಂಬಿ ತುಳುಕಿ ಹರಿಯುತ್ತಿರುವಂಥದು. ಇದನ್ನು ತಕ್ಷಣ ಹಂಚುವ ಕೆಲಸ ಮಾಡದಿದ್ದರೆ ಮುಂದಿನ ಸುಗ್ಗಿಗಳಲ್ಲಿ ಬರುವ ಆಹಾರ ಧಾನ್ಯಕ್ಕೆ ಬೆಲೆ ಇಲ್ಲದೆ ರೈತರು ಸಾಯಬೇಕಾದ ಬಿಕ್ಕಟ್ಟನ್ನು ತಪ್ಪಿಸುವುದಕ್ಕಾಗಿ ಈಗ ಗೋದಾಮುಗಳಲ್ಲಿ ಕೊಳೆಯುತ್ತಿರುವ ಧಾನ್ಯವನ್ನು ಸಮುದ್ರಕ್ಕೆ ಹಾಕಬೇಕಾಗುವುದು. ಒಂದು ಕಡೆಗೆ ಒಪ್ಪತ್ತು ಊಟಕ್ಕೂ ಗತಿಯಿಲ್ಲದ ಬಡಜನತೆ, ಇನ್ನೊಂದು ಕಡೆಗೆ ಸಂಗ್ರಹವಾಗಿ ಕೊಳೆತಿರುವ ಧಾನ್ಯ. ಈ ವಿಷಮತೆಯಿಂದ ಪಾರಾಗಲು ಪ್ರಧಾನಿಯವರು ಅಂತ್ಯೋದಯ ಅನ್ನ ಯೋಜನೆ"ಯನ್ನು ಪ್ರಾರಂಭಿಸಿ ಬಡವರ

ಬಂಧು ಎಂಬ ಬಿರುದನ್ನು ಪಡೆಯಲು ಮುಂದಾಗಿದ್ದರೆ. ಈ ಯೋಜನೆಯಲ್ಲಿ ರಾಜಕೀಯ ಲಾಭದ ದೃಷ್ಟಿಕೋನವೂ ಇಲ್ಲದಿಲ್ಲ. ಹೀಗೆ ಒಂದೇ ಕಲ್ಲಿನಿಂದ ಎರಡು ಹಕ್ಕಿಗಳನ್ನು ಹೊಡೆಯುವ ಪ್ರಯತ್ನ ಇಲ್ಲಿದೆ. ಇದು ಸಾಲದೆಂಬಂತೆ ಪ್ರಧಾನಿಯವರು ಕೇರಳದ ತಮ್ಮ ವಿರಾಮ ವಿಹಾರದ ಖರ್ಚಿಗಾಗಿ ಸಂಬಂಧಿಸಿದ ಸರ್ಕಾರಗಳ ಖಜಾನೆಯ ಮೇಲೆ ಸಾಕಷ್ಟು ಭಾರವನ್ನು ಹಾಕಿದ್ದಾರೆ. ಬಹಳ ದುಬಾರಿಯ ಮಾಂಸದೂಟವನ್ನು ಮಾಡಿದ್ದಾರೆ ಮತ್ತು ಅವರ ಸಾಕುಮಗಳು ೨೭ ಸಾವಿರ ರೂಪಾಯಿಗಳಷ್ಟು ಬೆಲೆ ಬಾಳುವ ಹಲವಾರು ಸೀರೆಗಳನ್ನು ಖರೀದಿಸಿದ್ದಾಳೆ. ಇವೆಲ್ಲವೂ ಬಡವರ ಹಿತಚಿಂತನೆಯ ಹಿಂದೆಯೇ ನಡೆದ ಸಂಗತಿಗಳು. ಇಂಥ ಹಿನ್ನೆಲೆಯನ್ನಿಟ್ಟುಕೊಂಡು ಪ್ರಧಾನಿಯವರು ತಮ್ಮ ಜನ್ಮ ದಿನವನ್ನು ಆಚರಿಸಿದುದು ಎಷ್ಟು ಸರಿ, ಎಷ್ಟು ನೈತಿಕವೆಂದು ಎಲ್ಲರೂ ಯೋಚಿಸಬೇಕು.

ಪ್ರಧಾನಿಯವರಿಗಿಂತ ನಾವೇನು ಕಡಿಮೆ ಇಲ್ಲ ಎಂಬುದನ್ನು ತೋರಿಸಲು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧೀ ತಮ್ಮ ಕುಟುಂಬದ ಎಲ್ಲ ಸದಸ್ಯರೊಂದಿಗೆ ಲಕ್ಷದ್ವೀಪಕ್ಕೆ ಹಲವಾರು ದಿನಗಳು ವಿಹಾರಕ್ಕೆ ಹೋಗಿದ್ದಾರೆ. ಅದೇ ರೀತಿ ನಮ್ಮ ರಾಜ್ಯದ ಮುಖ್ಯ ಮಂತ್ರಿ ತಮ್ಮ ಕುಟುಂಬದೊಂದಿಗೆ ಹಾಂಗ್‌ಕಾಂಗ್ ಮತ್ತು ಸಿಂಗಪುರಗಳಿಗೆ ವಿಹಾರಹೋಗಿದ್ದಾರೆ. ಈ ರಾಜಕಾರಣಿಗಳಿಗಿಂತ ತಾವು ಯಾವುದಕ್ಕೂ ಕಡಿಮೆ ಇಲ್ಲ ಎಂದು ತೋರಿಸುವುದಕ್ಕಾಗಿ ರೈಲ್ವೆ ಇಲಾಖೆಯ ಅತ್ಯಂತ ಹಿರಿಯ ಅಧಿಕಾರಿಗಳು ಎರಡು ವಿಶೇಷ ರೈಲುಗಳನ್ನು ಹೊರಡಿಸಿಕೊಂಡು ಕೇರಳಕ್ಕೆ ವಿಹಾರ ಹೋಗಿದ್ದಾರೆ.

ಇದೆಲ್ಲ ಕುರಿತು ಯೋಚನೆ ಮಾಡುವಾಗ ಈ ಹಿಂದೆ ಆಗಿಹೋದ ಕೆಲ ನಾಯಕರ ಜೀವನದ ದೃಷ್ಟಾಂತಗಳು ಕಣ್ಣುಮುಂದೆ ಕಟ್ಟುತ್ತವೆ. ಮೊದಲನೆಯದು ರಾಷ್ಟ್ರಪಿತ ಗಾಂಧೀಯದು. ಅವರು ತಮ್ಮ ಸಾರ್ವಜನಿಕ ಜೀವನವನ್ನು ತಮ್ಮ ೨೪ ವರ್ಷಯಸ್ಸಿನಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಪ್ರಾರಂಭಿಸಿದರು. ತಮ್ಮ ೭೮ ನೇ ವಯಸ್ಸಿನಲ್ಲಿ ಗುಂಡೇಟು ತಿನ್ನುವುದರ ಮೂಲಕ ದೇಶಕ್ಕಾಗಿ ಪ್ರಾಣ ಕೊಟ್ಟರು. ಅವರ ಒಟ್ಟು ೫೫ ವರ್ಷದ ಜೀವನದಲ್ಲಿ ಒಂದೇ ಒಂದು ದಿನ ರಜೆ ತೆಗೆದುಕೊಂಡವರಲ್ಲ. ಅದೇ ರೀತಿ ಸುಭಾಷ್ ಚಂದ್ರಬೋಸ್ ಮತ್ತು ಲಾಲ್ ಬಹುದ್ದೂರ್‌ಶಾಸ್ತ್ರಿ. ಅವರು ಎಂದೂ ತಮ್ಮ ವಿಚಾರ ಮತ್ತು ಆಚಾರದಲ್ಲಿ ವಿಸಂಗತಿಯನ್ನು ತಂದುಕೊಳ್ಳಲಿಲ್ಲ. ಅದೇ ರೀತಿ ಅತ್ಯಂತ ಕಡಿಮೆ ರಜೆ ಪಡೆದು ನಿಷ್ಠೆಯಿಂದ ಕೆಲಸ ಮಾಡಿದ ಅಧಿಕಾರಿಗಳೂ ಉಂಟು. ನಮ್ಮ ದೇಶಕ್ಕೆ ಅವರು ಆದರ್ಶರಾಗಬೇಕೇ ಹೊರತು ಇವರಲ್ಲ.

★ ★ ★

ಕಳೆದ ಡಿಸೆಂಬರ್ ೨೩ ರಂದು ಕೆ. ಎಸ್. ನಾರಾಯಣಸ್ವಾಮಿಯವರು ತೀರಿಕೊಂಡರು. ಅನೇಕ ಸಾಹಿತಿಗಳ, ವಿಚಾರವಂತರ ಮತ್ತು ಸಾಮಾಜಿಕ ಕಾರ್ಯಕರ್ತರ ಮರಣದ ವಾರ್ತೆಯಂತೆ ನಾರಾಯಣಸ್ವಾಮಿಯವರ ಮರಣವೂ ಸಹ ಪತ್ರಿಕೆಗಳಲ್ಲಿ ಒಂದು ಸಾಲಿನ ಸುದ್ದಿಯಾಗಿ ಪ್ರಕಟಗೊಂಡು ಅವರ ಜೀವನದ ದೀರ್ಘ ಸಾಹಿತ್ಯ ಸೇವೆಗೆ ತೆರೆ ಎಳೆಯಿತು. ಆದರೆ ನಾರಾಯಣ ಸ್ವಾಮಿಯವರನ್ನು ನಿಕಟವಾಗಿ ಬಲ್ಲಂಥವರಿಗೆ ನಿಜವಾದ ಅರ್ಥದಲ್ಲಿ ತುಂಬಿಬರಲಾರ ದಂಥ ನಷ್ಟ. ಅಪಾರವಾಗಿ ಇರುವ ಗಾಂಧೀ ಸಾಹಿತ್ಯವನ್ನು ಕನ್ನಡಿಗರಿಗೆ ತೆಕ್ಕೆತೆಕ್ಕೆ ಯಾಗಿ ಒದಗಿಸಿರುವ ಸಿದ್ಧಹಸ್ತರು ನಾರಾಯಣಸ್ವಾಮಿ; ಅತ್ಯಂತ ಸಹೃದಯರು: ಇತರರ ಏಳಿಗೆಯನ್ನು ನೋಡಿ ಎದೂ ಕರುಬಿದವರಲ್ಲ; ಬದಲಿಗೆ ಮೆಚ್ಚುಗೆ ಯನ್ನು ತೋರಿಸಿದವರು: ಅವರು ಮಾಡಿದ ಸಾಹಿತ್ಯ ಸೇವೆಯನ್ನು ಗಮನಿಸಿ ಬಂದ ಎಲ್ಲ ಪ್ರಕಾರದ ಸನ್ಮಾನ - ಪ್ರಶಸ್ತಿಗಳನ್ನು ನಿರ್ವಿಕಾರ ಭಾವನೆಯಿಂದ ದೂರ ಇಟ್ಟರು. ಎಲ್ಲವನ್ನೂ ಅವರು ಪ್ರತಿಫಲಾಪೇಕ್ಷೆಯಿಲ್ಲದೆ ಮಾಡಿದರು. ಕನ್ನಡದಷ್ಟೇ ಇಂಗ್ಲೀಷ್ ಭಾಷೆಯ ಮೇಲೂ ಪ್ರಭುತ್ವವನ್ನು ಹೊಂದಿದ್ದರು. ಆ ಭಾಷೆಯಲ್ಲಿಯೂ ಸಾಹಿತ್ಯ ರಚಿಸಿದರು. ಅವರಿಗೆ ಆಧ್ಯಾತ್ಮಿಕ ವಿಚಾರದಲ್ಲಿ ಬಹಳ ಒಲುವಿತ್ತು. ದೇಶದ ಹಾಗೂ ವಿದೇಶದ ಘಟನೆಗಳನ್ನು ವಿಶ್ಲೇಷಣಾ ತ್ಮಕವಾಗಿ ನೋಡುವ ಸಾಮರ್ಥ್ಯವನ್ನು ಪಡೆದಿದ್ದರು. ಕರ್ನಾಟಕದ ಶ್ರೇಷ್ಠ ಚಿಂತಕರಲ್ಲಿ ಒಬ್ಬರಾಗಿದ್ದರು. ಆದರೆ ಎಂದೂ ಸ್ವಪ್ರತಿಷ್ಠೆಯನ್ನು ಮೆರೆದವ ರಲ್ಲ. ಯಾರ ಮನಸ್ಸನ್ನೂ ನೋಯಿಸಿದವರಲ್ಲ. ತಮ್ಮದೇ ಆದ ತರ್ಕಬದ್ಧ ಹಾಗೂ ಮೆದು ಮಾತುಗಳಿಂದ ಎಂಥವರನ್ನೂ ಒಪ್ಪಿಸುವ ಸಾಮರ್ಥ್ಯವುಳ್ಳವ ರಾಗಿದ್ದರು. ಅವರು ತಮ್ಮ ಜೀವನದ ಅನುಭವಗಳನ್ನು ಕುರಿತು ಜೀವನ ಚರಿತ್ರೆಯನ್ನು ಬರೆಯಲು ತೊಡಗಿದ್ದರು; ಜಯಪ್ರಕಾಶ ನಾರಾಯಣರ ಜನ್ಮ ಶತಮಾನೋತ್ಸವ ನಿಮಿತ್ತ ಅವರ ಬಗ್ಗೆ ಬರೆಯಲು ಸಿದ್ಧತೆ ಮಾಡಿಕೊಂಡಿ ದ್ದರು. ಅವರ ಬಹಳ ಇತ್ತೀಚಿನ ಕೃತಿ "ಗಾಂಧೀಜಿಯ ಕಡೆಯ ದಿನಗಳು" ಕನ್ನಡ ಜನಪ್ರಿಯ ವಾರಪತ್ರಿಕೆ "ಸುಧಾ" ದಲ್ಲಿ ಧಾರಾವಾಹಿಯಾಗಿ ಪ್ರಕಟ ಗೊಂಡ ಲೇಖನಗಳನ್ನು ಬೆಂಗಳೂರಿನ ಪ್ರಿಸಂ ಪ್ರಕಾಶಕರು ಅದನ್ನು ನಾರಾ ಯಣಸ್ವಾಮಿಯವರ ಮರಣಕ್ಕೆ ಕೆಲವೇ ದಿನಗಳ ಮುನ್ನ ಪ್ರಕಟಿಸಿ ಅವರ ಆತ್ಮಕ್ಕೆ ಶಾಂತಿಯನ್ನು ತಂದುಕೊಟ್ಟಿದ್ದಾರೆ.

ಜನಪದ ಸೇವಾ ಟ್ರಸ್ಟ್ ಮತ್ತು "ಜನಪದ ವಿಚಾರ"ದ ಬಗ್ಗೆ ವಿಶೇಷ ಪ್ರೀತಿಯಿಟ್ಟಿದ್ದರು. ಅವರ ಆತ್ಮವು ಶಾಂತಿಯಿಂದಿರಲಿ! **ಸು. ಕಾ.**

ಹೊಸ ವರ್ಷವು ಹುತಾತ್ಮರ ತ್ಯಾಗ ಮರೆಯದಿರಲಿ!

–ಸುರೇಂದ್ರ ಕೌಲಗಿ

ಜನವರಿ ೧ ಹೊಸ ವರ್ಷದ ಪ್ರಾರಂಭದ ದಿನವಾದರೆ ಜನವರಿ ೩೦ ಹುತಾತ್ಮರ ದಿನ. ಇವೆರಡೂ ದಿನಗಳು ಹೊಸ ವರ್ಷದ ಮೊದಲ ತಿಂಗಳಲ್ಲಿಯೇ ಬಂದಿರುವುದು ನಮ್ಮ ದೇಶದ ಸೌಭಾಗ್ಯ. ಏಕೆಂದರೆ ಆ ಎರಡು ದಿನಗಳೂ ಭಾರತೀಯರ ಜೀವನದಲ್ಲಿ ಪ್ರಮುಖವಾದ ದಿನಗಳು; ಆತ್ಮಪರೀಕ್ಷೆಯ ದಿನಗಳು, ಇಲ್ಲಿ ಈಗ ನಾವು ಜನವರಿ ೩೦ ಹುತಾತ್ಮರ ದಿನಾಚರಣೆಯನ್ನು ಕುರಿತು ಆಲೋಚಿಸೋಣ. ಈ ದಿನವನ್ನು "ಸರ್ವೋದಯ ದಿನ" ಎಂದೂ ಆಚರಿಸಲಾಗುತ್ತದೆ. ಆ ದಿನ ರಾಷ್ಟ್ರಪಿತ ಮಹಾತ್ಮ ಗಾಂಧೀ ಓರ್ವ ಮತಾಂಧನ ಗುಂಡಿಗೆ ಬಲಿಯಾದರು. ಇದೇ ರೀತಿ ಸ್ವಾತಂತ್ರ್ಯದ ಹೋರಾಟದ ಸುಮಾರು ೧೦೦ ವರ್ಷಗಳ ಅವಧಿಯಲ್ಲಿ ದೇಶಕ್ಕಾಗಿ ಸಾವಿರಾರು ಜನರು ಪ್ರಾಣಾರ್ಪಣೆ ಮಾಡಿದ್ದರು. ಆ ಎಲ್ಲ ಹುತಾತ್ಮರನ್ನು ಕೃತಜ್ಞತಾಪೂರ್ವಕವಾಗಿ ನೆನೆಯುವ ದಿನವಾಗಿಯೂ ಜನವರಿ ೩೦ ನ್ನು ಮೀಸಲಿಡಲಾಗಿದೆ.

ಹುತಾತ್ಮರ ದಿನವನ್ನು ೧೯೪೮ ನೇ ಇಸ್ವಿಯಿಂದಲೂ ಆಚರಿಸಿಕೊಂಡು ಬರಲಾಗುತ್ತಿದೆ. ಇದುವರೆಗೆ ಅದು ಕೇವಲ ಔಪಚಾರಿಕವಾಗಿ ಆಚರಿಸಲ್ಪಡುತ್ತ ಬಂದಿದೆ. ಆದರೆ ೨೦೦೧ ನೇ ವರ್ಷದಲ್ಲಿ ಇದನ್ನು ನಾವು ಗಂಭೀರವಾಗಿಯೂ, ವೈಚಾರಿಕವಾಗಿಯೂ ಆಚರಿಸಬೇಕಾಗಿದೆ. ಏಕೆಂದರೆ, ನಮ್ಮ ದೇಶದಲ್ಲಿ ವಿಶ್ವೀಕರಣ, ಉದಾರೀಕರಣ, ಖಾಸಗೀಕರಣದಂಥ ಬದಲಾವಣೆಯ ಗಾಳಿ ೧೯೯೦ ರಿಂದ ಬೀಸಲು ಪ್ರಾರಂಭಿಸಿತು. ಅದಕ್ಕೆ ೧೦ ವರ್ಷಗಳಾದವು. ಈ ಸಣ್ಣ ಅವಧಿಯಲ್ಲೇ ನಮ್ಮ ದೇಶದ ಕೈಗಾರಿಕೆಗಳು ಮುಚ್ಚುತ್ತಿವೆ; ನಿರುದ್ಯೋಗ ಹೆಚ್ಚಾಗುತ್ತಿದೆ; ಗ್ರಾಮ ಜೀವನ ಉಚ್ಚಾಟಿತಗೊಂಡಿದೆ, ದೇಶದ ವಿದೇಶಿ ಸಾಲ ಮತ್ತು ಆಂತರಿಕ ಸಾಲ ಹೊರೆಹೊರೆಯಾಗಿ ಹೆಚ್ಚಿದೆ; ಬಹುರಾಷ್ಟ್ರೀಯ ಕಂಪನಿಗಳದೇ ಪ್ರಾಬಲ್ಯ ಹೆಚ್ಚಾಗಿದೆ; ಅಭಿವೃದ್ಧಿಯ ಹೆಸರಿನಲ್ಲಿ ಪರಿಸರದ ನಾಶ ವೇಗವಾಗಿ ಆಗುತ್ತಿದೆ; ದೇಶಿಯ ಭಾಷೆಗಳ ಅವಸಾನ ಪ್ರಾರಂಭವಾಗಿದೆ; ದೇಶದ ಸಂಸ್ಕೃತಿ ವಿಕೃತಗೊಳ್ಳುತ್ತಿದೆ. ಈ ಎಲ್ಲ ಬೆಳವಣಿಗೆಗಳು ಭಾರತ ಸ್ವಾತಂತ್ರ್ಯ ಹೋರಾಟದ ಉದ್ದೇಶಗಳಿಗೆ ತೀರ ಭಿನ್ನವಾದುದಾಗಿವೆ. ಈ ಸಂಗತಿ ಭಾರತೀಯ ಸ್ವಾತಂತ್ರ್ಯದ ಹೋರಾಟದ ಇತಿಹಾಸವನ್ನು ಓದಿದವರಿಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅಂದರೆ ಹುತಾತ್ಮರಾದ ಹೋರಾಟಗಾರರ ಅಭಿಪ್ರಾಯಕ್ಕೆ ತದ್ವಿರುದ್ಧವಾಗಿ ದೇಶದ ಆಗು–ಹೋಗುಗಳಿವೆ.

ಮತ್ತು ಹೊಸ ತಂತ್ರಜ್ಞಾನಗಳಿಂದ ನಮ್ಮ ದೇಶದ ಬೆಳವಣಿಗೆ ಸಮತೋಲನ ವಾಗಿ ಆಗುತ್ತಿಲ್ಲ; ಉಳ್ಳವರು – ಇಲ್ಲದವರ ಮಧ್ಯದ ಅಂತರ ಹೆಚ್ಚಾಗುತ್ತಲೇ ಇದೆ. ಆದ್ದರಿಂದ ಜನವರಿ ೩೦ ನ್ನು ಆತ್ಮನಿರೀಕ್ಷಣೆಯ ದಿನವೆಂದು ಆಚರಿಸ ಬೇಕಾದುದು ಇಂದಿನ ಕಾಲದ ಅಗತ್ಯವಾಗಿದೆ. ಇಂಥ ವಿಷಮ ಪರಿಸ್ಥಿತಿಯಲ್ಲಿ ನಮಗೆ ದಾರಿ ದೀವಿಗೆಯಾಗಿ ಒದಗಿ ಬರುತ್ತದೆ ಸರ್ವೋದಯ ಸಿದ್ಧಾಂತ. ವ್ಯಕ್ತಿಯನ್ನೂ, ಸಮಷ್ಟಿಯನ್ನೂ ಹಾಲು ಸಕ್ಕರೆಯಂತೆ ಹಿತಮಿತವಾಗಿ ಬೆರಸು ತ್ತದೆ ಸರ್ವೋದಯ ಸಿದ್ಧಾಂತ. ಸರ್ವೋದಯ ಶಬ್ದದ ಅರ್ಥವೇ ಸೂಚಿಸು ವಂತೆ ಎಲ್ಲರ ಉದಯ ಆ ಸಿದ್ಧಾಂತದ ಗುರಿ. ಅಂದ ಮೇಲೆ ಇಂದಿನ ಎಲ್ಲ ಪ್ರಕಾರದ ಅಸಮತೋಲನ ಅಭಿವೃದ್ಧಿ ಮಾರ್ಗಗಳಿಗಿಂತ ಎಲ್ಲರ ಉದಯ ವನ್ನು ಸಾಧಿಸುವ ಸಮತೋಲನವಾದ ಸರ್ವೋದಯ ಮಾರ್ಗ ಶ್ರೇಷ್ಠವಲ್ಲವೆ? ಹಾಗಾದರೆ ಇದನ್ನು ಸಾಧಿಸುವ ಬಗೆ ಹೇಗೆ? ಇದಕ್ಕೆ ನಿರ್ಮಿಸಬೇಕಾದ ಸಂಘಟನೆ ಎಷ್ಟು ದೊಡ್ಡದು? ಈ ಪ್ರಶ್ನೆಗಳಿಗೆಲ್ಲ ಸರಳವಾದ ಉತ್ತರವಿದೆ ಸರ್ವೋದಯ ಸಿದ್ಧಾಂತದಲ್ಲಿ. ಇದನ್ನು ಸಾಧಿಸಲು ಬೇಕಾದುದು ಸಮಾಜದ ಪ್ರತಿಯೊಬ್ಬ ಮಾನವನಲ್ಲಿ ಸತ್ಯ–ಪ್ರೇಮ–ಅಹಿಂಸೆ ಹಾಗೂ ತ್ಯಾಗದ ಮೌಲ್ಯ ಗಳು. ಇವೇ ಸರ್ವೋದಯ ಸಮಾಜ ರಚನೆಗೆ ಬೇಕಾದ ಬಂಡವಾಳ ಮತ್ತು ಸಂಘಟನಾ ಶಕ್ತಿ ಕೂಡ. ವ್ಯಕ್ತಿ–ವ್ಯಕ್ತಿಯಿಂದ ಕೂಡಿದ ಈ ಮಾನವ ಸಮಾಜ ದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತ್ಯಾಗವನ್ನೇ ತನ್ನ ಜೀವನದ ಮೌಲ್ಯವಾಗಿಟ್ಟು ಕೊಂಡರೆ ಎಲ್ಲೆಲ್ಲೂ, ಎಲ್ಲ ಕಾಲದಲ್ಲೂ ಸುಖ–ಶಾಂತಿ–ಸಮೃದ್ಧಿ ಉಂಟಾಗು ವುದರಲ್ಲಿ ಸಂದೇಹವಿಲ್ಲ. ಶ್ರೀಸಾಮಾನ್ಯನೆಂದರೆನೇ ಗಾಂಧೀ ಎಂಬ ವಿಚಾರ ಪಡಮೂಡಿರುವಾಗ ಇಂದೇಕೆ ಶ್ರೀಸಾಮಾನ್ಯ ಗಾಂಧೀ ಯಿಂದ ದೂರ ಸರಿಯುತ್ತಿದ್ದಾನೆ? ಜೀವನದ ವಾಸ್ತವ ಸಂಗತಿಗಳಿಗೆ ಹೆದರಿ ಇನ್ನು ಯಾವುದೂ ಭದ್ರವಲ್ಲದ ನೆಲೆಯ ಆಸರೆ ಪಡೆಯಲು ಏಕೆ ಪ್ರಯತ್ನಿಸುತ್ತಿದ್ದಾನೆ? ಗಾಂಧೀಜಿಯವರ ಸರಳವಾದ ವಿಚಾರಗಳು ಇಂದೇಕೆ ಕಷ್ಟಕರವಾಗಿ ಕಾಣುತ್ತಿವೆ? ಇದು ಒಂದು ಗೂಢವಾದ ಪ್ರಶ್ನೆಯಾಗಿದೆ. ಇದನ್ನು ಬಿಡಿಸುವ ಕೆಲಸವನ್ನು ಶ್ರದ್ಧೆಯಿಂದ ಮಾಡಬೇಕಾಗಿದೆ. ಏಕೆಂದರೆ ಪ್ರಪಂಚದಲ್ಲಿ ಭಾರಿ ದೊಡ್ಡ ವಿಚಾರವೆಂದು ಪ್ರಖ್ಯಾತವಾಗಿದ್ದ ಮತ್ತು ಜೊತೆಗೆ ರಾಜ್ಯಶಕ್ತಿಯನ್ನೂ ಪಡೆದಿದ್ದ ಕಮ್ಯುನಿಸಂನಂಥ ರಾಜಕೀಯ ತತ್ವ ಕೇವಲ ೭೦ ವರ್ಷಗಳ ಅವಧಿಯಲ್ಲಿ ನೆಲ ಕಚ್ಚಿರುವಾಗ, ಅತಿಯಾದ ಭೋಗದ ಜೀವನದತ್ತ ಕರೆದುಕೊಂಡು ಹೋಗುವ ಬಂಡವಾಳಶಾಹಿ ಪದ್ಧತಿ ಒಟ್ಟಾರೆ

ರಕ್ಷಾಪುಟ ನೋಡಿ

(ಮುಂದುವರಿದುದು)

ಕಪ್ಪುಹಣದಿಂದ ಮುಕ್ತಿಯೆಂತು?

– ಎನ್. ವಿಠಲ್
ಅಧ್ಯಕ್ಷರು, ಕೇಂದ್ರ ಜಾಗೃತ ಆಯೋಗ

ಸತ್ಯ ಸಂಗತಿಯೇನೆಂದರೆ, ನಮ್ಮ ಇಡೀ ರಾಜಕಾರಣ ಮತ್ತು ಚುನಾವಣಾ ಪದ್ಧತಿ ಕಪ್ಪುಹಣವನ್ನೇ ಅವಲಂಬಿಸಿದೆ. ಯಾವುದೇ ಒಂದು ಚುನಾವಣೆಯಲ್ಲಿ ಬಡವನಿಂದ ಹಿಡಿದು ಶ್ರೀಮಂತ ಅಭ್ಯರ್ಥಿಯ ವರೆಗಿನ ಪ್ರತಿಯೊಬ್ಬನಿಗೂ ಹಣ ಬೇಕೇಬೇಕು. ಹಣವಿಲ್ಲದೆ ಯಾವೊಬ್ಬನೂ ಚುನಾವಣಾ ಪ್ರಚಾರದಲ್ಲಿ ಕೆಲಸ ಮಾಡಲು ಸಿದ್ಧನಿಲ್ಲ. ಈ ಹಣವು ನಗದು ರೂಪದಲ್ಲಿಯೇ ಇರಬೇಕಾಗುತ್ತದೆ. ಇಂಥ ಹಣ ಹೆಚ್ಚಾಗಿ ತೆರಿಗೆಗಳ್ಳತನ ಮಾಡಿ ಸಂಪಾದಿಸಿದ ಕಪ್ಪುಹಣವೇ ಆಗಿರುತ್ತದೆ. ಅಂದರೆ, ನಮ್ಮ ಇಡೀ ರಾಜಕೀಯ ಬೆಳವಣಿಗೆಯೇ ಬಹಳಷ್ಟು ಪ್ರಮಾಣದಲ್ಲಿ ಕಲುಷಿತಗೊಂಡ ಹಣದಿಂದಲೇ ಪೋಷಿಸಲ್ಪಟ್ಟಿದೆ. ಭಾರತದ ಕ್ರೋಢೀಕೃತ ಉತ್ಪಾದನೆಯಲ್ಲಿ (ಜಿಡಿಪಿಯಲ್ಲಿ) ಶೇಕಡಾ ೪೦ ರಷ್ಟು ಹಣ ಕಪ್ಪೇ ಆಗಿದೆ. ಆದ್ದರಿಂದ ಭಾರತೀಯ ರಾಜಕಾರಣ ಗಣನೀಯವಾಗಿ ಕಪ್ಪು ಹಣದೊಂದಿಗೆ ಸಂಪರ್ಕವಿರಿಸಿಕೊಂಡಿರುವ ಸಂಗತಿ ಆಶ್ಚರ್ಯವೇನೂ ಅಲ್ಲ.

ರಾಜಕಾರಣಿಗಳಾಗಲೀ ಅಥವಾ ರಾಜಕೀಯದಲ್ಲಿ ಭಾಗವಹಿಸುವವರಾಗಲೀ ಮಾತ್ರ ಭ್ರಷ್ಟರಾಗಿದ್ದಾರೆಂದೇನೂ ಅಲ್ಲ. ಅವರಲ್ಲಿ ಅನೇಕರು ಒಳ್ಳೆಯ ವೃತ್ತಿಯುಳ್ಳವರಾಗಿದ್ದಾರೆ ಮತ್ತು ರಾಜಕಾರಣದಲ್ಲಿ ಸಮಯವನ್ನು ಕಳೆಯದೇ ತಮ್ಮದೇ ವೃತ್ತಿಗಾಗಿ ಕೆಲಸಮಾಡಿದರೆ ಅವರು ಬಹಳಷ್ಟು ಸಂಪಾದಿಸಬಹುದು. ಇನ್ನೂ ಅನೇಕ ಪ್ರಾಮಾಣಿಕ ಮತ್ತು ನಿಷ್ಠಾವಂತ ನಾಯಕರಿದ್ದಾರೆ. ಅವರು ಕಪ್ಪುಹಣವನ್ನು ಇಷ್ಟಪಡುವುದಿಲ್ಲ. ಇಲ್ಲಿ ಆಗಿರುವುದೇನೆಂದರೆ ಹಲವಾರು ವರ್ಷಗಳ ಅವಧಿಯಲ್ಲಿ ಒಂದು ಹೊಸ ಬಗೆಯ "ರಾಜಕೀಯ ಸಂಸ್ಕೃತಿ" ಹುಟ್ಟಿಕೊಂಡಿದೆ. ಇದರ ಪ್ರಕಾರ ವ್ಯಕ್ತಿಗತ ಹಂತದಲ್ಲಿ ಪ್ರಾಮಾಣಿಕನಾಗಿರುವ ನಾಯಕ ತನ್ನ ಪಕ್ಷಕ್ಕಾಗಿ ಹಣಸಂಗ್ರಹಿಸಬೇಕಾದ ಸಂದರ್ಭದಲ್ಲಿ ಪ್ರಶ್ನಾರ್ಹವಾದ ಮೂಲಗಳಿಂದ ಹಣ ಸಂಗ್ರಹಿಸುತ್ತಾನೆ. ಇದೇ ರಾಜಕೀಯ ಭ್ರಷ್ಟಾಚಾರದ ಮೂಲ ನೆಲೆ. ರಾಜಕೀಯಕ್ಕೆ ಹಣ ಒದಗಿಸುವ ಕ್ರಿಯೆಯನ್ನು ಪಾರದರ್ಶಕಗೊಳಿಸಿದರೆ ಎರಡು ಲಾಭಗಳಾಗುವ ಸಾಧ್ಯತೆ ಇದೆ : ಮೊದಲನೆಯದಾಗಿ, ರಾಜಕೀಯ ಪ್ರಕ್ರಿಯೆ ಬಹಿರಂಗಗೊಳ್ಳುವುದು ಮತ್ತು ಲೆಕ್ಕಾಚಾರಕ್ಕೆ ಸಿಗುವುದು; ಎರಡನೇಯದಾಗಿ, ಕಪ್ಪುಹಣದ ಮೇಲಿನ ಅವಲಂಬನೆ ದೂರಾಗುವುದು. ಇದರ ಒಟ್ಟಾರೆ ಪರಿಣಾಮ ಕಡಿಮೆ ಪ್ರಮಾಣದ ಭ್ರಷ್ಟ ರಾಜಕೀಯ

ಕ್ರಿಯೆಗಳು.

ಭಾರತ ಒಂದು ಭ್ರಷ್ಟ ರಾಷ್ಟ್ರ. ಒಂದು ಅಂತರ್‌ರಾಷ್ಟ್ರೀಯ ಅಧ್ಯಯನದ ಪ್ರಕಾರ ಇಂಥ ೯೦ ದೇಶಗಳ ಪಟ್ಟಿಯಲ್ಲಿ ಭಾರತದ ಸ್ಥಾನ ೭೩ನೇ ದ್ದಾಗಿದೆ. ಭ್ರಷ್ಟಾಚಾರವು ನಮ್ಮ ರಾಷ್ಟ್ರೀಯ ಸುರಕ್ಷಿತತೆಯನ್ನೇ ಆತಂತಕ್ಕೆ ಒಡ್ಡಿದೆ. ಹವಾಲಾ ಅವ್ಯವಹಾರವು ಭ್ರಷ್ಟರಾದ ನೇತಾ, ಬಾಬು, ಲಾಲಾ, ಚೇಲಾ ಮತ್ತು ದಾದಾ ಅವರುಗಳ ಮಧ್ಯ ಇರುವ ಸಂಬಂಧವನ್ನು ಬೆಳಕಿಗೆ ತಂದಿದೆ.

ರಾಜಕೀಯ ಭ್ರಷ್ಟಾಚಾರವನ್ನು ಮೂಲದಲ್ಲಿಯೇ ತಡೆಯಲು ಸಾಧ್ಯವಾಗುವಂತೆ ಚುನಾವಣೆಗಳಿಗೆ ಹಣವನ್ನು ತೊಡಗಿಸುವ ಕ್ರಿಯೆಯಲ್ಲಿ ಏನಾದರೂ ಸುಧಾರಣೆ ತರಬಹುದೇ ಹೇಗೆ ಎಂದು ನಾವು ಪರಿಶೀಲಿಸಬೇಕು. ಈ ಸಂಬಂಧ ಚರ್ಚೆಗೆ ಒಳಗಾಗಿರುವ ಒಂದು ವಿಚಾರ ಇದೆ. ಚುನಾವಣೆಗಳಿಗೆ ಸಾರ್ವಜನಿಕ ಹಣವನ್ನು ಅಂದರೆ ಸರ್ಕಾರಿ ಹಣವನ್ನು ತೊಡಗಿಸುವುದು. ನನ್ನ ಅಭಿಪ್ರಾಯದಲ್ಲಿ ಇದು ಸಾರ್ವಜನಿಕ ಹಣದ ಪೋಲೇ ಸರಿ. ಸಂಪನ್ಮೂಲಗಳನ್ನು ಹಣದ ಮೂಲಕ ಕೊಡದೆ ದೂರದರ್ಶನದಲ್ಲಿ ಸಮಯದ ಹಂಚಿಕೆ ಅಥವಾ ಜಾಹಿರಾತುಗಳಿಗಾಗಿ ಸ್ಥಳಾವಕಾಶ ಮುಂತಾದ ರೂಪಗಳಲ್ಲಿ ಕೊಟ್ಟರೂ ಪ್ರಜಾತಾಂತ್ರಿಕ ಚುನಾವಣಾ ಪದ್ಧತಿಯಲ್ಲಿ ಹಣವನ್ನು ಸಂಗ್ರಹಿಸುವ ಮತ್ತು ವ್ಯಕ್ತಿ ಬಲಾಢ್ಯತನವನ್ನು ಪ್ರದರ್ಶಿಸುವ ಮನೋಭಾವ ಇದ್ದೇ ಇರುತ್ತದೆ.

ಒಂದು ವಿಧಾನ ಸಭಾ ಸ್ಥಾನಕ್ಕೆ ೫೦ ಲಕ್ಷ ರೂಪಾಯಿಗಳನ್ನೂ ಮತ್ತು ಒಂದು ಲೋಕಸಭಾ ಸ್ಥಾನಕ್ಕೆ ೨ ಕೋಟಿ ರೂಪಾಯಿಗಳನ್ನೂ ಸಾರ್ವಜನಿಕ ನಿಧಿಯಿಂದ ಕೊಟ್ಟರೂ ಸಹ ಇನ್ನೂ ಹೆಚ್ಚಿನ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುವ ಪ್ರಯತ್ನ ಇದ್ದೇ ಇರುತ್ತದೆ. ಸಮಾಜಹಿತವಿರೋಧಿಗಳು ಈ ಧನಸಹಾಯವನ್ನು ಲಪಟಾಯಿಸುವುದಕೋಸ್ಕರವೇ ಚುನಾವಣಾ ಕಣದಲ್ಲಿ ಇಳಿಯುವ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ.

ಅಲ್ಲದೆ, ಭಾರತ ಸರ್ಕಾರದ ಬಳಿ ಹಣವಿಲ್ಲ. ರಾಜ್ಯ ಸರ್ಕಾರಗಳಲ್ಲಂತೂ ಇನ್ನೂ ಹಣವಿಲ್ಲ. ಆದ್ದರಿಂದ ಚುನಾವಣೆಗಳಲ್ಲಿ ಭಾಗವಹಿಸುವ ಉಮೇದುವಾರರಿಗೆ ಸಾರ್ವಜನಿಕ ನಿಧಿಯಿಂದ ಹಣ ಒದಗಿಸಲು ಸಾಧ್ಯವಿಲ್ಲ ಮತ್ತು ಅದು ಭ್ರಷ್ಟಾಚಾರದ ನಿಯಂತ್ರಣದತ್ತ ಪರಿಣಾಮಕಾರಿಯಲ್ಲದ ಹಾಗೂ ನಾಟಕೀಯ ಕ್ರಮವಾಗುತ್ತದೆ ಅಷ್ಟೆ. ಆದ್ದರಿಂದ ಈ ವಿಚಾರವನ್ನು ಕೈಬಿಡುವುದೇ ಲೇಸು.

೨೭ನೇ ಪುಟ ನೋಡಿ

ಶಿಕ್ಷಣ ವಿಚಾರಧಾರೆ............

ಸಮಸ್ಯಾ ವ್ಯಾಸಂಗ

– ಆಚಾರ್ಯ ಕೃಪಲಾನಿ

(ಶಿಕ್ಷಣ ಕ್ಷೇತ್ರ ಎಂದಿನಿಂದಲೂ ವಿಮರ್ಶೆಗೆ ಒಳಗಾಗುತ್ತ ಬಂದಿರುವಂಥದು. ಶಿಕ್ಷಣವು ಅನ್ನ ಕಾಯಕದ ಸುತ್ತ ಇರಬೇಕೆಂಬ ಗಾಂಧೀಜಿಯವರ ವಿಚಾರದ ಬೆಳವಣಿಗೆಯನ್ನು ಕೃಪಲಾನಿಯವರು ಇಲ್ಲಿ ದಾಖಲಿಸಿದ್ದಾರೆ. ಗುರಿ ಮತ್ತು ಗುರು ಇಲ್ಲದ ಇಂದಿನ ಶಿಕ್ಷಣ ಪದ್ಧತಿಯ ವಿರುದ್ಧವಾಗಿ ಅನ್ನಕಾಯಕದ ಶಿಕ್ಷಣವು ಇಂದಿಗೂ ಪ್ರಸ್ತುತವಾಗಿದೆಯೆಂಬುದು ೬೨ ವರ್ಷಗಳ ಹಿಂದೆ ೧೯೩೭ ರಲ್ಲಿ ಗಾಂಧೀಜಿ ಹೇಳಿದ್ದರೆಂಬುದು ಆ ವಿಚಾರದ ಆಕರ್ಷಣೆ. ಇಲ್ಲಿ ಆ ವಿಚಾರಗಳನ್ನು ಕ್ರಮಶಃ ಕೊಡಲಾಗುತ್ತಿದೆ. ಇದು ಏಳನೆಯ ಕಂತು. -ಸಂ)

ಜೀವನಕ್ಕಾಗಿಯೆ ಅಲ್ಲವೆ ಶಿಕ್ಷಣ? ಆದುದರಿಂದ ಜೀವನದಿಂದ, ಜೀವನದ ಸಮಸ್ಯೆಗಳಿಂದ ಅದನ್ನು ಖಂಡಿಸಿ ಬೇರೆ ಮಾಡಲು ಸಾಧ್ಯವಿಲ್ಲ. ಜೀವನ ಎಲ್ಲಿಯೂ ಸರಳವಲ್ಲ. ಬಹಳ ತೊಡಕು. ಅದರ ಸಮಸ್ಯೆಗಳೂ ತೊಡಕೇ. ಬಾಳಿನಲ್ಲಿ ಬರುವ ನಿಜವಾದ ತೊಂದರೆ ತೊಡಕುಗಳನ್ನು ಯಾವುದೋ ಒಂದು ವಿಶಿಷ್ಟ ಶಾಸ್ತ್ರ ವ್ಯಾಸಂಗದಿಂದ ಶಾಖಾಪಾಂಡಿತ್ಯದಿಂದ ಪರಿಹರಿಸಿಕೊಳ್ಳಲಾರೆವು. ಜೀವನದ ಒಂದೊಂದು ಸಮಸ್ಯೆಯೂ ಹಲವಾರು ವಿಷಯಗಳಿಗೆ ಸಂಬಂಧಿಸಿರುತ್ತದೆ. ಅದನ್ನು ಬಿಡಿಸಲು ಅದಕ್ಕೆ ನಿಕಟ ಸಂಬಂಧವುಳ್ಳ ಹಲವು ವಿಷಯಗಳ ನೆರವು ಅಗತ್ಯ. ವ್ಯವಸಾಯವನ್ನೇ ತೆಗೆದುಕೊಳ್ಳಿ. ಅದಕ್ಕೆ ಸಂಬಂಧಿಸಿದಂತೆ ಜೀವಶಾಸ್ತ್ರ,ಭೌತಶಾಸ್ತ್ರ, ರಸಾಯನ ಶಾಸ್ತ್ರಗಳನ್ನು ಮಾತ್ರ ಕಲಿತರೆ ಸಾಲದು; ಅರ್ಥಶಾಸ್ತ್ರ, ರಾಜ್ಯಶಾಸ್ತ್ರಗಳ ಸಂಬಂಧವನ್ನೂ ತಿಳಿದುಕೊಳ್ಳಬೇಕು. ಭೌತವಿಜ್ಞಾನವನ್ನು ಅಭ್ಯಾಸ ಮಾಡಿದರೆ ಅವನು ಒಳ್ಳೆಯ ಬೇಸಾಯಗಾರನಾದಾನು. ಆದರೆ ಪೇಟೆಯ ಧಾರಣೆ, ಅದರ ಏರಿಳಿತಗಳ ಕಾಲ ಗೊತ್ತಿರದಿದ್ದರೆ ಮತ್ತು ಅರ್ಥಶಾಸ್ತ್ರ, ರಾಜ್ಯಶಾಸ್ತ್ರಗಳ ಸಾಮಾನ್ಯ ಪರಿಚಯವೂ ಇಲ್ಲದಿದ್ದರೆ ವಿಜ್ಞಾನದ ಬಲದಿಂದ ಹೇರಳವಾಗಿ ಬೆಳೆಸಿದ ಧಾನ್ಯವೆಲ್ಲ ಮಾರಾಟವಾಗದೆ ತನ್ನ ಕಣಜದಲ್ಲೇ ಕೊಳೆಯುವ ಹಾಗೆ ಆದೀತು. ಈಗಿನ ವಿದ್ಯಾಭ್ಯಾಸವು ರೈತನಿಗೆ ಭೌತವಿಜ್ಞಾನ ಶಾಸ್ತ್ರಗಳನ್ನು ಮಾತ್ರ ಕಲಿಸಿ, ಆರ್ಥಿಕ ವ್ಯಾವಹಾರಿಕ ಜ್ಞಾನವನ್ನು ಹೇಗಾದರೂ ನೀನೇ ನಿನ್ನ ಸ್ವಾನುಭವದ ಮೂಲಕ ಕಲಿತುಕೋ ಎಂದು ಕೈಬಿಡುತ್ತದೆ.

ಜೀವನದಲ್ಲಿ ಸಮಸ್ಯೆಗಳು ಬಂದಬಂದಂತೆ ಅವಕ್ಕೆ ಸಂಬಂಧಿಸಿದ ವಿಷಯಗಳನ್ನೆಲ್ಲಾ, ಪರಸ್ಪರ ಸಂಬಂಧಿಸಿದವನ್ನೆಲ್ಲಾ ಅಭ್ಯಾಸ ಮಾಡುವುದೇ ನಿಜವಾದ ಶಿಕ್ಷಣ ಪದ್ಧತಿ. ಅದೇ ಜೀವನಕ್ಕೆ ಮೇಳಗೂಡುವ ಪದ್ಧತಿ. ಅವಶ್ಯಕತೆಯಿದ್ದರೆ ಆಮೇಲೆ ಬೇರೆ ಬೇರೆ ವಿಷಯಗಳನ್ನು ಪೃಥಕ್ಕರಿಸಿ ವಿಶೇಷ

ವ್ಯಾಸಂಗ ಮಾಡಬಹುದು. ಇದು ವಿಶೇಷ ಪ್ರತಿಭಾವಂತರಿಗೆ ಮಾತ್ರ: ಸಾಮಾನ್ಯ ವಿದ್ಯಾರ್ಥಿಗಳಿಗಲ್ಲ. ಈಗ ಕಲಿಸುವ ವಿಷಯುಗಳಲ್ಲಿ ಪರಸ್ಪರ ಸಂಬಂಧವೇ ಇಲ್ಲ. ಜೀವನದಲ್ಲಿ ಯಾವ ಸಂಬಂಧವೂ ಸಂಭವವಿಲ್ಲದಂಥವನ್ನು ಅಸ್ವಾಭಾವಿಕವಾಗಿ ಪಾಠಕ್ರಮದಲ್ಲಿ ತುರುಕಿದ್ದಾರೆ. ಸಮನ್ವಯ ಮಾರ್ಗದಲ್ಲಿ ಸಮಗ್ರ ದೃಷ್ಟಿಯಿಂದ ನಡೆಯುತ್ತಿಲ್ಲ. ನಮ್ಮ ಅಧ್ಯಾಪಕರಿಗೆ, ಪ್ರಾಧ್ಯಾಪಕರಿಗೆ ಇನ್ನೊಂದು ಸಂಸ್ಥೆಯಲ್ಲಿ ತಮ್ಮ ಸಹಚಾರಿಗಳು ಏನು ಮಾಡುತ್ತಿದ್ದಾರೋ ತಿಳಿಯದು. ಹೀಗೆ ಜೀವನದ ತೊಡಕುಗಳನ್ನು ಅಸಹಜವಾಗಿ ಸುಲಭಗೊಳಿಸಹೋಗಿ ವಿದ್ಯಾರ್ಥಿಗೂ ಅಧ್ಯಾಪಕನಿಗೂ ಹಾನಿಯುಂಟು ಮಾಡುತ್ತಾರೆ. ಜೀವನಕ್ಕೂ, ಜೀವನದ ಪ್ರಶ್ನೆಗಳಿಗೂ ದೂರವಾಗಿ ಶಿಕ್ಷಣ ಬರೀ ಶಾಬ್ದಿಕ, ಸಾಂಪ್ರದಾಯಿಕ, ಅಸ್ವಾಭಾವಿಕ ಆಗುತ್ತದೆ. ಶಿಕ್ಷಣವನ್ನು ಒಂದು ಕೈಗಾರಿಕೆಯ ಸುತ್ತ ಹೆಣೆದರೆ ಆಗ ಈ ಅಸ್ವಾಭಾವಿಕ ಪೃಥಕ್ಕರಣವೂ ಒಂದೊಂದು ವಿಷಯದ ಪ್ರತ್ಯೇಕತೆಯೂ ಮಾಯವಾಗುತ್ತದೆ. ಆಗ ಬೇರೆ ಬೇರೆ ಅಧ್ಯಾಪಕರ, ಬೇರೆ ಬೇರೆ ಶಿಕ್ಷಣ ಸಂಸ್ಥೆಗಳ ಕೆಲಸವೆಲ್ಲವೂ ಒಂದಕ್ಕೊಂದು ಹೆಣೆದುಕೊಂಡು, ಸಮಗ್ರವಾಗುತ್ತದೆ, ಸಂಪೂರ್ಣವಾಗುತ್ತದೆ. ಶಿಕ್ಷಣ ಸಂಸ್ಥೆ, ಅಧ್ಯಾಪಕರು, ವಿದ್ಯಾರ್ಥಿಗಳು ಒಂದು ಸಹಕಾರ ಪ್ರಯತ್ನದಲ್ಲಿ ಭಾಗಿಗಳಾಗುತ್ತಾರೆ. ಇದರಿಂದ ಜ್ಞಾನದ ಪ್ರಗತಿಯೂ ಆಗುತ್ತದೆ, ಪ್ರತ್ಯಕ್ಷ ವ್ಯಾವಹಾರಿಕ ಫಲವೂ ಸಿಗುತ್ತದೆ. ಇಂಥ ಶಿಕ್ಷಣವು ಜೀವನಕ್ಕೆ, ಜೀವನದ ಸಮಸ್ಯೆಗಳಿಗೆ ಸರಿಯಾದ ಸಿದ್ಧತೆಯಾಗುತ್ತದೆ. ★

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ"ದ ಈ ಸಂಚಿಕೆಯನ್ನು ನಿಮ್ಮ ಬಳಿಗೆ ತಲುಪಿಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ! ಅನೇಕ ವರ್ಷಗಳ ನಂತರ ಪುನಃ ಪತ್ರಿಕೆ ದಿನದ ಬೆಳಕನ್ನು ಕಂಡಿದೆ – ಹೊಸ ಶತಮಾನದ, ಹೊಸ ಸಹಸ್ರಮಾನದ ಸಂಕ್ರಾಂತಿ ಕಾಲದ ಪ್ರೇರಣೆಯೊಂದಿಗೆ. ದಯಮಾಡಿ ವಾರ್ಷಿಕ ಚಂದಾ ೧೦೦/– ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯ ಮುಂಬೆಲೆ ೧೦/– ರೂ. ಗಳನ್ನಾಗಲೀ ನಿಮ್ಮ ಇಚ್ಛೆಗನುಸಾರವಾಗಿ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಮ್ರ ಕೋರಿಕೆ.

–ಪ್ರಕಾಶಕರು

ಪಂಡಿತ ಜವಹರಲಾಲ ನೆಹರು

- ವಿನೋಬಾ

ಜವಾಹರಲಾಲ್ ನೆಹರೂ ಮತ್ತು ನನ್ನ ಮಧ್ಯ ಅತ್ಯಂತ ಪ್ರೇಮ, ಆದರ ಮತ್ತು ವಿಶ್ವಾಸವಿತ್ತು. ಅವರು ನನ್ನ ಅಣ್ಣನಂತೆ ಇದ್ದರು. ಅವರು ಗಾಂಧೀಜಿಯವರ ಪ್ರೀತಿಯ ಅನುಯಾಯಿಯಾಗಿದ್ದರು. "ನನ್ನ ತರುವಾಯ ಜವಾಹರ ಕಾರ್ಯನಿರ್ವಹಿಸುವರೆಂಬುದಾಗಿ" ಗಾಂಧೀಜಿ ಹೇಳಿದ್ದರು, ಪಂಡಿತಜಿಯವರಿಗೆ ವ್ಯವಹಾರಿಕ ಬುದ್ಧಿ ಇತ್ತು. ನನಗೆ ರಾಜನೀತಿಯ, ವ್ಯವಹಾರದ ಬುದ್ಧಿ ಇಲ್ಲವೆಂದು ಗಾಂಧೀಜಿಗೆ ಗೊತ್ತಿತ್ತು. ಆದ್ದರಿಂದ ಅವರು ರಾಜನೀತಿಯ ಕೆಲಸವನ್ನು ಪಂಡಿತಜಿಯವರಿಗೂ, ಆಧ್ಯಾತ್ಮಿಕ ಕೆಲಸವನ್ನು ನನಗೂ ವಹಿಸಿದರು.

ನಾನು ಒಂದು ಸಲ ಅವರಿಗೆ ಹೇಳಿದೆ, "ಬಾಪೂ ೧೨೫ ವರ್ಷಗಳ ಕಾಲ ಬದುಕುವವಮಾತನಾಡುತ್ತಿದ್ದರು. ನೀವು ಅವರ ಇಚ್ಛೆಯನ್ನು ಪೂರ್ತಗೊಳಿಸಿರಿ" ಅದಕ್ಕೆ ಅವರು ನಕ್ಕು ಬಿಟ್ಟರು. ಅವರು ಆ ರೀತಿ ಬದುಕಲಾಗಲಿಲ್ಲ; ಪಂಡಿತಜಿ ೭೫ನೇ ವರ್ಷದಲ್ಲಿ ತೀರಿಕೊಂಡರು.

ಬಾಪೂರ ಮಹಾಪ್ರಯಾಣದ ನಂತರ ಸೇವಾಗ್ರಾಮದಲ್ಲಿ ಒಂದು ಸಮ್ಮೇಳನ ಸೇರಿತ್ತು. ಅಲ್ಲಿ ಪಂಡಿತಜೀಯವರ ಸ್ಥಿತಿಯನ್ನು ನೋಡಿ ಮತ್ತು ಅವರ ಕೋರಿಕೆಯ ಮೇರೆಗೆ ನಾನು ನಿರಾಶ್ರಿತರ ಸೇವೆಗಾಗಿ ಪ್ರಯೋಗದ ಆಧಾರದ ಮೇಲೆ ಆರು ತಿಂಗಳ ಸಮಯ ಕೊಡಲು ಒಪ್ಪಿದೆ. ಆದರೆ ಯಾರ ಮೂಲಕ ಈ ಕೆಲಸ ನಡೆಯುತ್ತಿತ್ತೊ ಅವರ ವಿಚಾರಗಳು ಬೇರೆ ಆಗಿದ್ದರಿಂದ ನಾನು ಆ ಕೆಲಸಕ್ಕೆ ಹೋಗಲಿಲ್ಲ.

ಒಂದು ಸಲ ಪಂಡಿತಜಿ ನನ್ನನ್ನು ಪಟ್ಟಿಕಲ್ಯಾಣದಲ್ಲಿ ಭೇಟಿ ಮಾಡಲು ಬಂದಿದ್ದರು. ಮಾತುಕತೆಯಾಯಿತು. ಅವರನ್ನು ಬೀಳ್ಕೊಡಲು ನಾನು ಎದ್ದೇಳುತ್ತಿದೆ. ಆದರೆ ನಾನು ಬರಬಾರದೆಂದು ಹೇಳಿ ನನ್ನನ್ನು ಒತ್ತಾಯದಿಂದ ಕೂಡಿಸಿಬಿಟ್ಟರು. ಆಶ್ರಮದ ಉಳಿದ ನಿವಾಸಿಗಳು ಅವರನ್ನು ಬೀಳ್ಕೊಡಲು ಹೋದರು. ಕಾರಿನಲ್ಲಿ ಕುಳಿತುಕೊಳ್ಳುವಾಗ ಅವರು, "ಈಗ ನಾನು ಪಂಜರದಲ್ಲಿ ಸೇರುತ್ತಿದ್ದೇನೆ" ಎಂದು ಉದ್ಗರಿಸಿದರು. ಈ ಮಾತಿನ ಅರ್ಥ ನನ್ನ ಆಶ್ರಮವಾಸಿಗಳಿಗಾಗಲಿಲ್ಲ. ಆದ್ದರಿಂದ ಪಂಡಿತಜಿ ನುಡಿದ ಆ ಮಾತಿನ ಅರ್ಥವೇನು ಎಂದು ಆಶ್ರಮವಾಸಿಗಳು ನನ್ನನ್ನು ಕೇಳಿದರು. ನನ್ನ ಮತ್ತು ಪಂಡಿತಜಿಯವರ ಸಂವಾದದ ಕಾಲದಲ್ಲಿ ನಾನು ಪಂಡಿತಜಿ

ಯವರಿಗೆ ಅಂದಿದ್ದೆ, "ನಾನು ತೆರೆದ ಬಯಲಿನ ನಾಯಿಯಂತೆ ಇದ್ದೇನೆ. ಆ ನಾಯಿ ಗಟ್ಟಿಯಾಗಿ ಗರ್ಜನೆ ಮಾಡುತ್ತದೆ. ಇದು ಕಚ್ಚುವ ನಾಯಿಯಲ್ಲ, ಕೇವಲ ಬೊಗಳುವ ನಾಯಿಯಾದ್ದರಿಂದ ಪರವಾಗಿಲ್ಲ ಎಂದು ಜನ ಭಾವಿಸು ತ್ತಾರೆ. ಆದರೆ ನೀವು ಪಂಜರದಲ್ಲಿಯ ಹುಲಿ. ನೀವು ಹೊರಗೆ ಇದ್ದು ಗರ್ಜನೆ ಮಾಡಿದ್ದರೆ ಒಮ್ಮೆಲೆ ಅದರ ಪ್ರಭಾವ ಉಂಟಾಗುತ್ತಿತ್ತು. ಆದರೆ ನೀವು ಒಳಗೆ ಇದ್ದೀರಿ. ಆದ್ದರಿಂದ ನೀವು ಗರ್ಜಿಸಲಾರಿರಿ. ಆದ್ದರಿಂದ ಪಂಡಿತಜಿ ತಾವು ಪಂಜರದೊಳಗೆ ಹೋಗುತ್ತಿರುವುದಾಗಿ ಹೇಳಿದ್ದು" ಎಂದು ವಿವರಿಸಿದೆ.

ಒಂದು ಸಲ ನಾನು ಪಂಡಿತಜೀಯವರಿಗೆ ಅಂದಿದ್ದೆ, "ನೀವು ರಾಜಕೀಯಕ್ಕೆ ಯೋಗ್ಯರಲ್ಲ. ಏಕೆಂದರೆ ನಿಮ್ಮಲ್ಲಿ ಎರಡು ದೋಷಗಳಿವೆ – ಒಂದು, ನೀವು ಸುಳ್ಳು ಹೇಳಲಾರಿರಿ; ಎರಡು, ದ್ವೇಷಿಸಲಾರಿರಿ. ಈ ಎರಡೂ ಗುಣಗಳು ರಾಜಕೀಯಕ್ಕೆ ನಿಮ್ಮನ್ನು ಪೂರ್ಣ ಅನರ್ಹರನ್ನಾಗಿ ಮಾಡುತ್ತವೆ." ಆಗ ಪಂಡಿತಜಿ ವಿನೋದಪೂರ್ವಕವಾಗಿ ನುಡಿದರು, "ನಿಮ್ಮ ಮಾತು ನಿಜ. ಆದರೆ ನನ್ನಲ್ಲಿಯ ಈ ಕೊರತೆ ಏನಿದೆ ಅದು ಬಹುಶಃ ನನ್ನ ಕಾರ್ಯಾಲಯದ ಮೂಲಕ ಕೊಂಚ ಮಟ್ಟಿಗೆ ದೂರವಾಗುತ್ತಿರಬಹುದು." ಈಗ ಇದು ಕೂಡ ಸತ್ಯವೇ ಆಯಿತು. ಈ ರೀತಿ ಮಾಡುವುದು ಸಹ ರಾಜಕಾರಣಕ್ಕೆ ಒಗ್ಗು ವುದಿಲ್ಲ. ಆಗು ನಾನು ಹೇಳಿದೆ, "ರಾಜಕಾರಣ ಮತ್ತು ಧರ್ಮಗಳು ಅಪ್ರಸ್ತುತವಾಗಿವೆ. ಕೇವಲ ಆಧ್ಯಾತ್ಮಿಕತೆ ಮತ್ತು ವಿಜ್ಞಾನ ಉಳಿಯುವವು." ನೆಹರೂ ಈ ವಿಚಾರವನ್ನು ಪೂರ್ಣವಾಗಿ ಸಮರ್ಥಿಸಿದರು ಮತ್ತು ಅಂದರು," "ನಾನು ರಾಜಕಾರಣದಲ್ಲಿದ್ದರೂ ಸಹ ವಿನೋಬಾಜಿಯವರ ವಿಚಾರವನ್ನು ಒಪ್ಪು ವುದಕ್ಕೆ ನನ್ನ ಮನಸ್ಸು ಸಿದ್ಧವಿದೆ." ಅವರು ಈ ವಿಚಾರವನ್ನು ನನ್ನ ಪರವಾಗಿ ದೇಶ–ವಿದೇಶಗಳಲ್ಲಿ ಪ್ರಚಾರ ಮಾಡಿದರು.

ಆಗಿನ ದಿನಗಳಲ್ಲಿ ನೆಹರೂ ಸಾರ್ವಜನಿಕ ಭಾಷಣಕ್ಕಾಗಿ ನಿಂತಾಗ ಅವರಿಗೆ ಬಾಪೂನ ನೆನಪು ಬರುತ್ತಿತ್ತು. ಅಮೇರಿಕಾಕ್ಕೆ ಹೋಗುವ ಮೊದಲು ಅವರು ಪುಣೆಯ ಬಳಿ ಒಂದು ಯುದ್ಧವಿದ್ಯಾಲಯವನ್ನು ಉದ್ಘಾಟಿಸುವ ಕಾರ್ಯ ಮಾಡಿದರು. ಯುದ್ಧವಿದ್ಯೆ ಮತ್ತು ಬಾಪೂ ಅವರ ಶಿಕ್ಷಣ ಇವುಗಳ ಮಧ್ಯೆ ಸ್ಪಷ್ಟವಾದ ವಿಸಂಗತಿ ಇತ್ತು. ಇದು ಎಲ್ಲರಿಗೂ ಗೊತ್ತಿರುವ ವಿಚಾರ ಮತ್ತು ನೆಹರೂರಿಗೂ ಅನಿಸುತ್ತಿತ್ತು. ಆಗ ಅವರು, "ಬದುಕಿನಲ್ಲಿ ಇದು ಎಂಥ ವೈರುಧ್ಯ ಸಂಗತಿ! ಅಹಿಂಸೆಯಲ್ಲಿ ನಂಬಿಕೆ ಇಟ್ಟುಕೊಂಡಿದ್ದರೂ ನಾನು ಯುದ್ಧ–ವಿದ್ಯಾಲಯವನ್ನು ಉದ್ಘಾಟಿಸುತ್ತಿದ್ದೇನೆ!" ಈ ವಿದ್ಯಾಲಯದ

ಉದ್ಘಾಟನೆ ಆಗಿದೆಯೆಂದ ಮೇಲೆ ನಮ್ಮ ಯುದ್ಧದ ತರಬೇತಿ ಶ್ರೇಷ್ಠ ಗುಣ ಮಟ್ಟದ್ದೂ ಇರಬೇಕು ಎಂಬ ಆಶೆಯನ್ನು ವ್ಯಕ್ತಪಡಿಸಿದರು ಮತ್ತು ನಂತರ ಬಾಪೂರ ಸ್ಮರಣೆ ಮಾಡಿಕೊಳ್ಳುತ್ತಾ, "ಈ ಶಿಕ್ಷಣದ ಉಪಯೋಗವನ್ನು ನಾವು ಎಂದೂ ಪರಪೀಡನೆಗಾಗಿ ಮಾಡುವುದಿಲ್ಲ; ಆತ್ಮರಕ್ಷಣೆಗಾಗಿ ಮಾತ್ರ ಉಪಯೋಗಿಸುವೆವು. ಅದನ್ನು ಕೂಡ ಅನಿವಾರ್ಯವಾಗಿ." ಪಂಡಿತಜಿ ಈ ಮಾತುಗಳನ್ನು ವ್ಯಕ್ತಿಗತವಾಗಿ ಹೇಳಲಿಲ್ಲ. ಆ ಸಮಯದಲ್ಲಿ ಅವರು ಓರ್ವ ವ್ಯಕ್ತಿಯಾಗಿರಲಿಲ್ಲ. ಸಮಗ್ರ ಭಾರತದ ಪರವಾಗಿ ಮಾತನಾಡುತ್ತಿದ್ದರು. ಅವರು ಭಾರತದ ಒಂದು ಪರಿಮಿತಿಯ ವೃತವನ್ನು ಬಹಿರಂಗಪಡಿಸಿದರು.

ಈ ವಿಪರ್ಯಾಸ ಇಡೀ ಮಾನವ ಜೀವನದ ವಿಪರ್ಯಾಸವಾಗಿದೆ. ಮಾನವನಲ್ಲಿ ಆತ್ಮದ ಒಂದಂಶ ಮತ್ತು ದೇಹದ ಒಂದಂಶ ಇದೆ; ಇವೆರಡನ್ನೂ ನಾವು ತೃಪ್ತಿಪಡಿಸಬೇಕಾಗುತ್ತದೆ. ಆಗ ಇದರೊಳಗಿಂದಲೇ ವಿಪರ್ಯಾಸ ಹುಟ್ಟಿ ಕೊಳ್ಳುತ್ತದೆ. ದೇಶಕ್ಕೂ ಈ ಮಾತು ಅನ್ವಯಿಸುತ್ತದೆ. ದೇಶಕ್ಕೂ ಕೂಡ ಒಂದು ಆತ್ಮ ಮತ್ತು ಒಂದು ದೇಹವಿರುತ್ತದೆ. ಹಿಂದುಸ್ತಾನದ ಆತ್ಮವು ಅಹಿಂಸೆಯನ್ನು ಅಂಗೀಕರಿಸುತ್ತದೆ. ನಾವು ಆತ್ಮದ ಈ ಭೂಮಿಕೆಯತ್ತ ಹೋಗಬೇಕಿದೆ. ಆದರೆ ದೇಶದಲ್ಲಿ ಈ ಶಕ್ತಿ ಬರುವವರೆಗೆ ಅಹಿಂಸೆಯ ಜಪ ಮಾಡುತ್ತ ಶಸ್ತ್ರವಿದ್ಯೆಯ ಅಧ್ಯಯನವು ಒಂದು ಉತ್ತಮ ವಿಪರ್ಯಾಸ ವಾಗಿದೆ. ಶಸ್ತ್ರಬಲವು ಅಹಿಂಸೆಯನ್ನು ಅಂದರೆ ಮಾನವ ಪ್ರೇಮವನ್ನು ಧ್ರುವ ತಾರೆಯಂತೆ ಎದುರಿಗಿಟ್ಟುಕೊಂಡು ನಡೆದುದಾದರೆ ಶೌರ್ಯದ ಶಕ್ತಿ ಹೆಚ್ಚು ತ್ತದೆ. ಆದರೆ ಒಂದು ಸಲ ಶಸ್ತ್ರಬಲದಿಂದ ಮೇಲೇಳಲೇಬೇಕಾಗುವುದು. ಈ ದೃಷ್ಟಿ ಯಿಂದ ಪಂಡಿತಜಿಯವರ ಭಾಷಣ ವಿಶುದ್ಧವೂ, ಸರಳವೂ ಆದ ಅವರ ಹೃದ ಯದ ಉದ್ಗಾರವಾಗಿತ್ತು.

ಪಂಡಿತಜಿ ರಾಷ್ಟ್ರನಾಯಕರೂ ಮತ್ತು ಲೋಕನಾಯಕರೂ ಆಗಿದ್ದರು. ಈ ರೀತಿ ಎರಡು ಪ್ರಕಾರದ ನೇತೃತ್ವ ಒಬ್ಬ ಮನುಷ್ಯನಲ್ಲಿಯೇ ಒಟ್ಟಾಗಿ ಇರುವುದನ್ನು ನೋಡಲು ಸಾಮಾನ್ಯವಾಗಿ ದೊರೆಯುವುದಿಲ್ಲ. ಇದಲ್ಲದೆ, ಪಂಡಿತಜಿ ಒಂದು ಪಾರ್ಶ್ವ ರಾಷ್ಟ್ರಪುರುಷರಿದ್ದರು ಮತ್ತು ಇನ್ನೊಂದು ಪಾರ್ಶ್ವ ವಿಶ್ವಮಾನವರಿದ್ದರು. ಈ ಎರಡರ ಬಗ್ಗೆ ಅವರ ಮನಸ್ಸಿನಲ್ಲಿ ಪೂರ್ಣ ಏಕತೆ ಯಿತ್ತು. ನಮ್ಮ ರಾಷ್ಟ್ರದ ಹಿತವೂ ಇಡೀ ವಿಶ್ವದ ಹಿತವೂ ಒಂದೇ ಆಗಿದೆ; ಇವೆರಡರಲ್ಲಿ ವಿರೋಧ ಇರಲು ಸಾಧ್ಯವಿಲ್ಲ ಎಂಬ ವಿಶ್ವಾಸ ಅವರದಾಗಿತ್ತು. ಈ ವಿಶ್ವಾಸದ ಆಧಾರದಮೇಲೆ ಅವರು ಮಾತಾಡುತ್ತಿದ್ದರು.

ಪಂಡಿತಜಿಯವರ ಒಂದು ವಾಕ್ಯವು ಮಂತ್ರ ಸಮಾನವಾಗಿ ನನ್ನ ನೆನಪಿನ

ಲ್ಲಾಳಿದಿದೆ. "ಪ್ರಕೃತಿಯೊಂದಿಗೆ ಸಂಪರ್ಕ ಕಳೆದುಕೊಂಡೊಡನೆ ರಾಷ್ಟ್ರಗಳು ಮೃತವಾಗುತ್ತವೆ." ಯಾವ ರಾಷ್ಟ್ರಗಳಿಗೆ ಅಕ್ಕಪಕ್ಕದ ಪ್ರಕೃತಿಯೊಂದಿಗೆ ಸ್ಪರ್ಶವಿಲ್ಲವೋ ಆ ರಾಷ್ಟ್ರಗಳು ಕ್ಷೀಣಿಸುತ್ತವೆ, ಅವುಗಳ ಕ್ಷಯವಾಗುತ್ತದೆ. ಆದ್ದರಿಂದ ವ್ಯವಸಾಯದೊಂದಿಗೆ ಪ್ರತಿ ಮನುಷ್ಯನ ಸಂಪರ್ಕ ಬೇಕು ಒಳ್ಳೆಯದು. ಎಲ್ಲ ಸರ್ಕಾರಿ ನೌಕರರು, ಮಂತ್ರಿಗಳು ಮತ್ತು ಪ್ರಧಾನಮಂತ್ರಿಯು ಕೂಡ ಪ್ರತಿ ದಿನ ಒಂದು ಗಂಟೆ ಹೊಲದಲ್ಲಿ ಕೆಲಸ ಮಾಡಬೇಕೆಂದು ನಾನು ಪಂಡಿತಜಿಯವರಿಗೆ ಹೇಳಿದ್ದೆ. ಆಗ ಅವರು "ಇದು ಬಹಳೇ ಒಳ್ಳೆಯ ವಿಚಾರ. ಆದರೆ ಹೊಲದಲ್ಲಿ ಕೆಲಸ ಮಾಡಲು ನನಗೆಲ್ಲಿ ಕೊಡುತ್ತಾರೆ?" ಎಂದರು. ಪಂಡಿತಜಿಯವರಿಗೆ ಬಹಳ ಹೆಚ್ಚು ಕೆಲಸ ಇರುತ್ತಿತ್ತು.

ಒಂದು ಬಾರಿ ಅವರೊಂದಿಗೆ ನಾನು ಮಾತನಾಡುತ್ತಿದ್ದೆ. ಆಗ ನಾನು ಅವರನ್ನು ಕೇಳಿದೆ. ಅಧ್ಯಯನಕ್ಕಾಗಿ ಸಮಯ ದೊರೆಯುತ್ತದೆಯೋ ಇಲ್ಲವೋ? ಅದಕ್ಕೆ ಅವರು ಸಮಯ ದೊರೆಯುವುದಿಲ್ಲ, ಆದರೆ ಅದಕ್ಕಾಗಿ ಹೇಗೋ ಸಮಯವನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದರು. ಪಂಡಿತಜಿ ಒಂದು ಸೂತ್ರ ಕೊಟ್ಟಿದ್ದರು, "ಆರಾಮ್ ಹರಾಮ್ ಇದೆ." ನಾನು ಹೇಳಿದೆ, "ನಿಮ್ಮ ಸೂತ್ರದಲ್ಲಿ 'ರಾಮ್' ಎರಡು ಸಲ ಬಂದಿದೆ." ಅದಕ್ಕೆ ಅವರು ನಗಲು ಪ್ರಾರಂಭಿಸಿದರು. "ಗಾಢ ನಿದ್ರೆಯೂ ರಾಮ" ಎಂದೆ.

ಒಂದು ಸಲ ಅಲಹಾಬಾದಿನಲ್ಲಿ ಕುಂಭಜಾತ್ರೆ ನಡೆಯಿತು. ಪಂಡಿತಜಿ ಅಲ್ಲಿಗೆ ಹೋಗಿದ್ದರು ಅವರು ಹಳೇಕಾಲದ ಭಕ್ತರಂತಿರಲಿಲ್ಲ. ಅವರದು ಆಧುನಿಕ ಬುದ್ಧಿಯಾಗಿತ್ತು. ಆದರೂ ಕೂಡ ಜಾತ್ರೆಯನ್ನು ನೋಡಿ ದ್ರವಿತರಾದರು. ಅವರ ಕಣ್ಣುಗಳಿಂದ ನೀರು ಹರಿಯಲಾರಂಭಿಸಿತು. ಆ ಜಾತ್ರೆಯಲ್ಲಿ ೭೦ ಲಕ್ಷ ಜನ ಸೇರಿದ್ದರು. ಆ ದೃಶ್ಯವನ್ನು ನೋಡಿ ಅವರು ಸ್ತಂಭೀಭೂತರಾದರು. ಅವರು ಅಂದರು, "೭೦ ಲಕ್ಷ ಜನ ಅಂದರೆ ಯುರೋಪಿನಲ್ಲಿಯ ಒಂದು ದೇಶವಾಯಿತು. ಇಷ್ಟು ಜನರು ಡಾಂಭಿಕರಾಗಿರಲು ಸಾಧ್ಯವಿಲ್ಲ."

ಪಂಡಿತಜಿಯವರ ಮನಸ್ಸು ವಿಶ್ವದಂತೆ ವ್ಯಾಪಕವಾಗಿತ್ತು, ಯಾವುದೇ ಒಂದು ಪ್ರಾಂತದ ಅಭಿಮಾನವಿಲ್ಲ, ಯಾವುದೇ ಒಂದು ಭಾಷೆಯ ಆಗ್ರಹವಿಲ್ಲ. ಯಾವುದೇ ಧರ್ಮಪಂಥದ ಮಾನಸಿಕ ಸಂಬಂಧವಿಲ್ಲ. ಎಲ್ಲಿಗೇ ಹೋಗಲಿ ಎದುರಿಗಿರುವ ಜನಸಮೂಹವನ್ನು ನೋಡಿದಾಗ ಒಬ್ಬ ಸಹೋದರ ಇನ್ನೊಬ್ಬ ಸಹೋದರನನ್ನು ಭೇಟಿ ಮಾಡಿದಾಗ ಯಾವ ಆನಂದವಾಗುವುದೋ ಅಂಥ

೧೯ ಪುಟ ನೋಡಿ

ಜಾತ್ಯತೀತರು ಮತ್ತು ರಾಷ್ಟ್ರೀಯ ನೀತಿ ಸಂಹಿತೆ

–ಪೂರ್ಣಚಂದ್ರ ತೇಜಸ್ವಿ

ಚಾರಿತ್ರಿಕವಾಗಿ ಮೀಸಲಾತಿ ಎದುರಿಸಬೇಕಾಗಿ ಬಂದಿರುವ ಹಲವಾರು ಸಂದಿಗ್ಧ ಪರಿಸ್ಥಿತಿಗಳನ್ನೂ, ಅವು ಹುಟ್ಟುಹಾಕಿರುವ ವಿರೋಧಾಭಾಸಗಳನ್ನೂ ಮಂಡಿಸಬಯಸುತ್ತೇನೆ.

ಮೊಟ್ಟಮೊದಲನೆಯದಾಗಿ ಮೀಸಲಾತಿಯ ಮೂಲೋದ್ದೇಶದ ಬಗ್ಗೆಯೇ ಗೊಂದಲಗಳು ಆರಂಭವಾಗಿರುವುದನ್ನು ಗಮನಿಸಬೇಕು. ಮೀಸಲಾತಿಯು ಜಾತಿಗಳನ್ನು ಸಮರ್ಥಿಸುವ, ಜಾತೀಯತೆಯನ್ನು ಪ್ರೋತ್ಸಾಹಿಸುವ ಆಂದೋಳನವೆ ಅಥವಾ ಭಾರತದ ಜಾತ್ಯತೀತ ಆಂದೋಳನದ ಒಂದು ಭಾಗವೆ ಎಂಬುದನ್ನು ಈಗ ಸ್ಪಷ್ಟಪಡಿಸಬೇಕಾಗಿದೆ.

ಕೆಲವು ಕಾಲದ ಹಿಂದೆ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷರಾದ ಶ್ರೀ ಎಲ್. ಜಿ. ಹಾವನೂರ್‌ರವರು ಸಾರ್ವಜನಿಕ ಭಾಷಣ ಒಂದರಲ್ಲಿ ಮಾತನಾಡುತ್ತಾ, "ಜಾತಿಗಳು ಶಾಶ್ವತ. ಇವು ಸೂರ್ಯ ಚಂದ್ರರಿರುವವರೆಗೂ ಇರುತ್ತವೆ" ಎಂದು ಹೇಳಿಕೆ ಕೊಟ್ಟಿದ್ದಾರೆ. ಜಾತಿಗಳು ಮುಂದಿನ ಭವಿಷ್ಯದಲ್ಲೂ ಶಾಶ್ವತವಾಗಿ ಉಳಿಯುತ್ತವೆಯೋ ಇಲ್ಲವೋ ಭವಿಷ್ಯವನ್ನು ಬಲ್ಲವರಾರು? ಅದನ್ನು ಹಾವನೂರರು ಸಹ ಹೇಳಲಾರರು. ಆದರೆ ಈ ರೀತಿಯ ಹೇಳಿಕೆಯ ಮುಖಾಂತರ ಶ್ರೀ ಹಾವನೂರರು ಪ್ರತಿನಿಧಿಸಿರುವ ಧೋರಣೆ ಮಾತ್ರ ಕಳವಳಕಾರಿಯಾದುದು. ಮೀಸಲಾತಿಯ ಹಿಂದಿರುವ ಮೂಲ ಆಶಯಗಳಲ್ಲೇ ಗೊಂದಲ ಪ್ರಾರಂಭವಾಗಿರುವುದರ ಮುನ್ಸೂಚನೆ ಇದೆಂದು ನನಗೆ ಅನ್ನಿಸುತ್ತದೆ.

ಕರ್ನಾಟಕದಲ್ಲಿ ಮೀಸಲಾತಿ ಜಾರಿಗೆ ಬಂದನಂತರ ಸಂಭವಿಸಿದ ಕೆಲವು ಚಾರಿತ್ರಿಕ ಬೆಳವಣಿಗೆಗಳೂ ಈ ಗೊಂದಲಕ್ಕೆ ಕಾರಣವೆಂದು ಹೇಳಬಹುದು. ಮೀಸಲಾತಿಯ ಪರಿಣಾಮವಾಗಿ ಜಾತೀಯ ಸಂಘಟನೆಗಳು ಶುರುವಾದವು. ಅಸಂಘಟಿತವಾಗಿ ಕರ್ನಾಟಕದಾದ್ಯಂತ ಚದುರಿದ್ದ ಪ್ರತಿಯೊಂದು ಜಾತಿಯೂ ತನ್ನ ಅಸ್ತಿತ್ವವನ್ನು ಬಲಪಡಿಸಿಕೊಳ್ಳಲು ತಮತಮಗೆ ಒಂದು ಮಠವನ್ನೂ, ಅದಕ್ಕೊಬ್ಬ ಜಗದ್ಗುರುವನ್ನೂ ನಿರ್ಮಿಸತೊಡಗಿದವು.

ಇಷ್ಟಲ್ಲದೆ, ಅನೇಕ ಜಾತಿಗಳೊಳಗೆ ಉಪಪಂಗಡಗಳೇರ್ಪಟ್ಟು ಅವು ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಪ್ರತಿಪಾದಿಸತೊಡಗಿದವು. ಮುಸ್ಲಿ

ಮತ್ತು ಲಿಂಗಾಯಿತ ಕೋಮಿನ ಉದಾಹರಣೆಗಳನ್ನು ಇಲ್ಲಿ ಪರೀಶೀಲಿಸ ಬಹುದು.

ಇದರೊಡನೆ ಭಾರತದಲ್ಲಿ ಜಾತಿಪದ್ಧತಿ ಕೆಳವರ್ಗಗಳಲ್ಲಿ ವೃತ್ತಿಮೂಲ ವಾಗಿ ರೂಪುಗೊಂಡಿದ್ದರಿಂದ ನೂರಾರು ಹೊಸ ಹೊಸ ವೃತ್ತಿಯ ಸಮು ದಾಯಗಳು ಹುಟ್ಟಿಕೊಂಡು ನಾವೇ ಒಂದೊಂದು ಹೊಸ ಜಾತಿಗಳೆಂದು ಗುರುತಿಸಿಕೊಳ್ಳತೊಡಗಿದವು. ಈ ಎಲ್ಲ ಜಾತಿಗಳೂ ತಾವು ಅತ್ಯಂತ ಹಿಂದುಳಿ ದವುವೆಂದು ಹೇಳಿಕೊಂಡು ಮೀಸಲಾತಿಯಲ್ಲಿ ಸ್ಥಾನ ಕೇಳುತ್ತಾ ಹಿಂದುಳಿಯಲು ಪೈಪೋಟಿ ಆರಂಭಿಸಿದವು.

ಮೀಸಲಾತಿಯಿಂದ ಉದ್ಭವವಾದ ಈ ಬೆಳವಣಿಗೆಯನ್ನು ನಾನು ಅನಪೇಕ್ಷ ಣೀಯ ಬೆಳವಣಿಗೆ ಎಂದು ಆಕ್ಷೇಪಿಸುತ್ತಿಲ್ಲ ಅಥವಾ ಪ್ರೋತ್ಸಾಹಿಸಲು ಪ್ರತಿ ಪಾದಿಸುತ್ತಿಲ್ಲ. ಆದರೆ ಈ ಬೆಳವಣಿಗೆಯ ಅರ್ಥವೇನು ? ಇದು ಮೀಸ ಲಾತಿಯ ಉದ್ದೇಶವೆ ಎಂದು ವಿಶ್ಲೇಷಿಸಬಯಸುತ್ತೇನೆ. ಈ ಘಟ್ಟದಲ್ಲಿ ಯೋಚಿಸಿದಾಗ ಹಾವನೂರರ ಹೇಳಿಕೆ ಮತ್ತು ಆಶಯದಂತೆ ಮೀಸಲಾತಿಯೂ ಜಾತಿಗಳನ್ನೂ, ಜಾತೀಯತೆಯನ್ನೂ ಪೋಷಿಸುವ ಮತ್ತು ಪ್ರತಿಪಾದಿಸುವ ಆಂದೋಳನದಂತೆಯೇ ಕಾಣುತ್ತದೆ.

ಆದರೆ ನಮ್ಮ ಸಂವಿಧಾನದ ಕರ್ತೃ ಅಂಬೇಡ್ಕರ್ ಅವರು ಮೀಸಲಾತಿಯ ಹಿಂದೆ ಇಟ್ಟುಕೊಂಡಿದ್ದ ಉದ್ದೇಶ ಇದಲ್ಲವೆಂದು ನನ್ನ ದೃಢ ನಂಬಿಕೆ. ಜಾತ್ಯ ತೀತ ಭಾರತದ ನಿರ್ಮಾಣಕ್ಕಾಗಿಯೇ ಅವರು ಮೀಸಲಾತಿಯನ್ನು ಸಂವಿಧಾನ ದಲ್ಲಿ ಸೇರಿಸಿದುದು. ಜಾತಿಯ ಕಾರಣದಿಂದಲೇ ಹಿಂದುಳಿದ ವರ್ಗಗಳನ್ನು ಜಾತಿಗಳ ಮೂಲಕವೇ ಗುರುತಿಸಿ ಮೇಲೆತ್ತಬೇಕಾಗುತ್ತದೆಂದು ಅವರು ಮೀಸ ಲಾತಿಯನ್ನು ಸಂವಿಧಾನದಲ್ಲಿ ಅಳವಡಿಸಿದುದು. ಮೀಸಲಾತಿಯ ಹಿಂದಿನ ಅವರ ಉದ್ದೇಶ ಭಾರತವನ್ನು ಜಾತ್ಯತೀತ ರಾಷ್ಟ್ರವನ್ನಾಗಿಸಬೇಕೆಂಬುದೇ ಹೊರತು ವರ್ಣಾಶ್ರಮ ಧರ್ಮದ ಜಾತೀಯ ರಾಷ್ಟ್ರವಾಗಿ ರೂಪಿಸಬೇಕೆಂಬುದು ಅಲ್ಲ. ದೇಶ ವಿಭಜನೆಯಂಥ ಜಾತೀಯತೆಯ ಘೋರ ಪರಿಣಾಮಗಳು ಕಣ್ಣೆದು ರಿಗೆ ಇರುವಾಗ ಅವರ ಆದರ್ಶಗಳು ಜಾತ್ಯತೀತ ರಾಷ್ಟ್ರವಾಗಿತ್ತೆಂದು ನಾವು ನಿಸ್ಸಂಶಯವಾಗಿ ಹೇಳಬಹುದು.

ಮೀಸಲಾತಿಯ ಪೂರ್ವೋದ್ದೇಶ ಇದೆಂದು ನಾವು ಒಪ್ಪುವುದಾದರೆ ಸ್ವಾತಂ ತ್ರ್ಯೋತ್ತರ ಭಾರತದ ಕಳೆದ ಐದು ದಶಕಗಳ ಮೀಸಲಾತಿ ನಮ್ಮ ಸಂವಿಧಾ ನದ ಆಶೋತ್ತರಗಳ ದಿಕ್ಕಿನಲ್ಲಿ ಖಂಡಿತ ಸಾಗುತ್ತಿಲ್ಲವೆಂದು ಹೇಳಬಹುದು. ಜಾತಿಗಳನ್ನು ಸಂಘಟಿಸುವುದರ ಮುಖಾಂತರ, ಜಾತಿಗಳಲ್ಲಿ ಮೂಲಭೂತವಾದ

ವನ್ನು ಪ್ರಚೋದಿಸುವುದರ ಮುಖಾಂತರ ಹೆಚ್ಚು ಹೆಚ್ಚು ಉಪಜಾತಿಗಳನ್ನೂ, ಹೊಸ ಹೊಸ ಜಾತಿಗಳನ್ನೂ ನಿರ್ಮಿಸುವುದರ ಮುಖಾಂತರ ನಾವು ಜಾತ್ಯಾತೀತ ಸಮಾಜದತ್ತ ಸಾಗಲು ಸಾಧ್ಯವೇ ಇಲ್ಲ.

ನಾನು ಮೀಸಲಾತಿಯನ್ನು ತಿರಸ್ಕರಿಸುತ್ತಿಲ್ಲ. ಅದು ನಿಷ್ಪ್ರಯೋಜಕವೆಂದೂ ಅಲ್ಲಗಳೆಯುತ್ತಿಲ್ಲ. ಮೀಸಲಾತಿ ಇಲ್ಲದಿದ್ದರೆ ಹಿಂದುಳಿದ ಜಾತಿಗಳಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಮುಂದೆ ಬರಲು ಸಾಧ್ಯವಾಗುತ್ತಿರಲಿಲ್ಲವೆಂಬುದನ್ನು ನಾನು ಸರ್ವಥಾ ಒಪ್ಪುತ್ತೇನೆ. ಅಂದರೆ ಮೀಸಲಾತಿಯು ಜಾತಿಗಳಲ್ಲಿ ಒಂದು ಮಟ್ಟದ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯನ್ನು ತರುವುದರಲ್ಲಿ ಸಫಲವಾಗಿದೆ. ಆದರೆ ಇದು ಜಾತ್ಯತೀತ ರಾಷ್ಟ್ರ ನಿರ್ಮಿಸುವತ್ತ ಸಾಗುತ್ತಿದೆಯೋ ಇಲ್ಲವೆ ಎಂಬುದೇ ಈಗಿರುವ ಪ್ರಶ್ನೆ.

ಹಾಗಿದ್ದರೆ ಮೀಸಲಾತಿ ನಮ್ಮ ಸಂವಿಧಾನದ ಕರ್ತೃಗಳ ಮೂಲೋದ್ದೇಶಕ್ಕೆ ತದ್ವಿರುದ್ಧ ಪರಿಣಾಮಗಳನ್ನು ಏಕೆ ಮಾಡಿತು? ಕಳೆದ ಐವತ್ತು ವರ್ಷಗಳ ಮೀಸಲಾತಿಯ ಪರಿಣಾಮವಾಗಿ ಜಾತೀಯತೆ ಸಡಿಲವಾಗುವುದರ ಬದಲು ಇನ್ನಷ್ಟು ಬಿಗಿಯಾಗುತ್ತಾ, ಉಲ್ಬಣವಾಗುತ್ತಾ ಬಂದುದೇಕೆ?

ನಮ್ಮ ಸಂವಿಧಾನ ಕರ್ತೃಗಳಾದ ಅಂಬೇಡ್ಕರ್, ಲೋಹಿಯಾ ಹಾಗೂ ಜಯಪ್ರಕಾಶ್ ನಾರಾಯಣ ಮೊದಲಾದವರ ಕೆಲವು ಲೆಕ್ಕಾಚಾರಗಳು ತಪ್ಪಾದುವೆಂದು ಕಳೆದ ಐವತ್ತು ವರ್ಷಗಳ ಚರಿತ್ರೆಯನ್ನು ಅವಲೋಕಿಸಿದರೆ ತಿಳಿಯುತ್ತದೆ. ಇವರೆಲ್ಲ ಸಮಾಜದ ಕೆಳವರ್ಗದಲ್ಲಿದ್ದ ಜಾತಿಗಳನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಮೇಲೆತ್ತಿದರೆ ಅಂದರೆ ಜಾತಿಗಳ ನಡುವೆ ಒಂದು ಮಟ್ಟದ ಸಮಾನತೆಯನ್ನಾದರೂ ಸಾಧಿಸಿದರೆ ಜಾತಿ ಪದ್ಧತಿ ಮತ್ತು ಜಾತೀಯ ಸಂಕೋಲೆಗಳು ತಮ್ಮಿಂದ ತಾನೆ ಸಡಿಲಾಗುತ್ತಾ ವರ್ಣಾಶ್ರಮದ ಮೂಲ ಸಮಾಜವು ನಿಧಾನವಾಗಿ ವರ್ಗಮೂಲ ಸಮಾಜವಾಗಿ ರೂಪಾಂತರಗೊಳ್ಳುತ್ತದೆ ಎಂದು ಊಹಿಸಿದರು, ಇವರೆಲ್ಲರ ಈ ತಾತ್ವಿಕ ನಿಲುವಿಗೆ ಆ ದಶಕಗಳಲ್ಲಿದ್ದ ಡೈಲೆಕ್ಟಿಕಲ್ ಮೆಟೀರಿಯಲಿಸಂ ಪ್ರಭಾವವೂ ಕಾರಣವಿರಬಹುದು. ಜಾತಿಗಳ ನಡುವೆ ಆರ್ಥಿಕ ಸಮಾನತೆ ಸಾಧ್ಯವಾಗುತ್ತಲೂ ಅವು ತಮ್ಮ ವರ್ಣರೂಪವನ್ನು ಕಳೆದುಕೊಂಡು ಹೆಚ್ಚು ಚಲನಶೀಲವಾದ ವರ್ಗಗಳಾಗಿ ರೂಪಾಂತರಗೊಳ್ಳುತ್ತವೆ ಮತ್ತು ಸ್ಥಗಿತಗೊಂಡಿರುವ ಜಾತಿಗಳು ಸಡಿಲಾಗುತ್ತಾ ಜಾತಿಗಳ ನಡುವಿನ ಪ್ರತ್ಯೇಕತೆ ಕಡಿಮೆಯಾಗಿ ಒಂದರೊಳಗೊಂದು ವಿಲೀನವಾಗಲು ಶುರುವಾಗುತ್ತವೆ ಎಂದು ಅವರು ಭಾವಿಸಿದರು. ಇದು ತಂತಾನೆ ಸಂಭವಿಸುವ ಸಾಮಾಜಿಕ ಸ್ಥಿತ್ಯಂತರವಾದುದರಿಂದ ಅದಕ್ಕೊಂದು ಸಂವಿಧಾನಿಕ ಮಾರ್ಗ ಸೂಚಿಸಲಿಲ್ಲ ಅಥವಾ ಕಲ್ಪಿಸಲಿಲ್ಲ.

ಅವರ ಈ ನಿಲುವು ತಾತ್ವಿಕವಾಗಿ ತಪ್ಪೆಂದು ನಾನು ಭಾವಿಸುವುದಿಲ್ಲ. ಏಕೆಂದರೆ ವಾಸ್ತವವಾಗಿ ಜಾತಿಯ ವಜ್ರಮುಷ್ಟಿ ಸ್ವಾತಂತ್ರ್ಯಾನಂತರ ಸಡಿಲಾಗುತ್ತಾ ಬಂದಿದ್ದು ನಿಜ. ಜಾತಿಗಳು ಬೇರೆಬೇರೆಯಾದರೂ ಆರ್ಥಿಕವಾಗಿ ಒಂದೇ ವರ್ಗದಲ್ಲಿದ್ದ ಸಹಸ್ರಾರು ಯುವಕ ಯುವತಿಯರು ಅಂತರ್ಜಾತೀಯ ವಿವಾಹವಾಗತೊಡಗಿದ್ದನ್ನು ಈ ಸಂದರ್ಭದಲ್ಲಿ ನಾವು ಸ್ಮರಿಸಬಹುದು. ಆದರೆ ಈ ರೀತಿ ಜಾತಿಯ ಸಂಕೋಲೆಗಳನ್ನು ತ್ಯಜಿಸಿ ಮದುವೆಯಾಗಿದ್ದ ಯುವಜನರಿಗೆ ಎದುರಾದ ಪ್ರಶ್ನೆಯೆಂದರೆ ಮುಂದೇನು ಎನ್ನುವುದು. ನಮ್ಮ ಸಂವಿಧಾನದ ಕರ್ತೃಗಳ ಲೆಕ್ಕಾಚಾರ ತಪ್ಪಿದ್ದು ಇಲ್ಲೇ. ನಮ್ಮ ಸಂವಿಧಾನ ಜಾತ್ಯತೀತ ಎಂದು ಘೋಷಿಸಿತೇ ಹೊರತು ಸಂಪೂರ್ಣ ಜಾತಿ, ಧರ್ಮ, ಬುಡಕಟ್ಟುಗಳಿಂದ ತುಂಬಿದ್ದ ದೇಶದಲ್ಲಿ ಜಾತ್ಯತೀತರಾದವರನ್ನು ಗುರುತಿಸಿಕೊಳ್ಳಲು ಯಾವ ನಾಗರಿಕ ಸಂಹಿತೆಯನ್ನೂ ಬದಲಿಯಾಗಿ ಕೊಡಲಿಲ್ಲ. ಅಂತರ್ಜಾತಿಯ ವಿವಾಹದ ಯುವಕರಿಗೂ, ಅವರ ಮಕ್ಕಳಿಗೂ ಉಳಿದಿದ್ದು ಒಂದೇ ದಾರಿ. ತಮ್ಮ ಗಂಡನ ಅಥವಾ ತಂದೆಯ ಜಾತಿಯೊಂದಿಗೆ ಗುರುತಿಸಿಕೊಳ್ಳುವುದು. ನಮ್ಮ ಸಂವಿಧಾನದಲ್ಲಿ ಅಂತರ್ಗತವಾಗಿರುವ ಈ ವೈರುಧ್ಯದ ದೆಸೆಯಿಂದಲೇ ಭಾರತದ ಜಾತ್ಯತೀತ ಆಂದೋಲನ ನಿರಂತರವಾಗಿ ಕ್ಷುಲ್ಲಕ ಮತಾಂತರ ಆಂದೋಳನವಾಗಿ ಪರಿವರ್ತಿಸಲ್ಪಟ್ಟಿತು. ಗುರುಹಿರಿಯರನ್ನೂ, ಸಮಾಜವನ್ನೂ ಎದುರುಹಾಕಿಕೊಂಡು ಅಂತರ್ಜಾತಿಯ ವಿವಾಹದ ತರುಣ-ತರುಣಿಯರು ಕೊನೆಗೆ ಎಲ್ಲೂ ಸಲ್ಲದ ತ್ರಿಶುಂಕುಗಳಾಗಿ ಅನಾಥರಾಗಬೇಕಾದ ಪರಿಸ್ಥಿತಿ ಉಂಟಾಯ್ತು.

ಈ ಪರಿಸ್ಥಿತಿಯ ಅರಿವು ಅಂಬೇಡ್ಕರ್ ಅವರಿಗೆ ಇರಲಿಲ್ಲವೆಂದು ನಾನು ನಂಬುವುದಿಲ್ಲ. ಏಕೆಂದರೆ ಹಿಂದೂ ಧರ್ಮವನ್ನಾಗಲೀ, ವರ್ಣಾಶ್ರಮಧರ್ಮವನ್ನಾಗಲೀ ಸಂಪೂರ್ಣ ತಿರಸ್ಕರಿಸಿದ ಮೇಲೂ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳಲು ಯಾವುದಾದರೂ ಒಂದು ಗುಂಪಿನ ಜೊತೆ ಗುರುತಿಸಿಕೊಳ್ಳಬೇಕಾದ ಅನಿವಾರ್ಯತೆ ಇದ್ದುದರಿಂದಲೇ ಅಂಬೇಡ್ಕರ್ ಬೌದ್ಧ ಧರ್ಮವನ್ನು ಸ್ವೀಕರಿಸಿದ್ದು. ಇದರಿಂದ ತಮಗಿದ್ದ ಸಮಸ್ಯೆಯನ್ನು ಅಂಬೇಡ್ಕರ್ ವೈಯಕ್ತಿಕವಾಗಿ ಪರಿಹರಿಸಿಕೊಂಡರೇ ಹೊರತು ಜಾತ್ಯತೀತ ಆಂದೋಳನಕ್ಕೆ ಒಂದು ಸಂವೈಧಾನಿಕ ಅಸ್ತಿತ್ವವನ್ನು ಕೊಡಲಿಲ್ಲ. ಇಂದು ಬೌದ್ಧ ಧರ್ಮ ಜಗತ್ತಿನ ಅತ್ಯಂತ ಸೆಕ್ಯುಲರ್ ಧರ್ಮವಾಗಿದ್ದರೂ ಸಹ ಅದು ಜಾತ್ಯತೀತ ರಾಷ್ಟ್ರಕ್ಕೆ ಬದಲಿಯಾಗಲು ಸಾಧ್ಯವಿಲ್ಲ. ಅದಕ್ಕೆ ನಿಜವಾದ ಬದಲಿ 'ರಾಷ್ಟ್ರೀಯ ನಾಗರಿಕ ಸಂಹಿತೆ' ಮಾತ್ರ.

ಇವತ್ತು ಅಂತರ್ಜಾತಿಯ ವಿವಾಹದ ಜಾತ್ಯತೀತರನ್ನು ಬಿಟ್ಟರೆ 'ರಾಷ್ಟ್ರೀಯ

ನಾಗರಿಕ ಸಂಹಿತೆ' ಯಾರಿಗೂ ಬೇಡವಾಗಿದೆ. ಜಾತಿಯಿಂದ ದೊರಕುವ ಸವಲತ್ತುಗಳ ರುಚಿ ಹಿಡಿದಿರುವ ಪ್ರತಿಯೊಂದು ಜಾತಿ ಮತ್ತು ಧರ್ಮಗಳೂ ಇದನ್ನು ಉಗ್ರವಾಗಿ ವಿರೋಧಿಸುತ್ತಿವೆ. ಈಗಿರುವ ಒಂದೇ ದಾರಿಯೆಂದರೆ ಕೊನೆಯ ಪಕ್ಷ ಐಚ್ಛಿಕವಾಗಿ ಇಷ್ಟವಿದ್ದವರು ಇದನ್ನು ಆಯ್ಕೆ ಮಾಡಿಕೊಳ್ಳಬಹುದಾದ ಸವಲತ್ತನ್ನು ಸಂವಿಧಾನದಲ್ಲಿ ಕೊಡುವುದು. ಜಾತೀಯತೆಯ ಸಂಕೋಲೆಗಳಿಂದ ದೂರಾಗಲು ಹಂಬಲಿಸುವ ಆದರ್ಶವಾದಿಗಳಿಗಾದರೂ ಆಯ್ಕೆಯ ಸ್ವಾತಂತ್ರ್ಯ ನೀಡುವುದು.

ಸಂವಿಧಾನದ ತಿದ್ದುಪಡಿಯಂಥ ಗುರುತರ ಹೊಣೆ ಹಿಂದುಳಿದ ವರ್ಗಗಳ ಆಯೋಗದ ವ್ಯಾಪ್ತಿಗೆ ಮೀರಿದ್ದೆಂದ್ದು ನನಗೆ ಗೊತ್ತು. ಆದರೆ ಈ ಆಯೋಗ ತನ್ನ ಪರಿಮಿತಿಯೊಳಗೆ ಅಂತರ್ಜಾತೀಯ ವಿವಾಹವಾದವರನ್ನು ಜಾತ್ಯತೀತ ಗುಂಪೆಂದು ಗುರುತಿಸಿ ಅವರಿಗೆ ಕೊಂಚವಾದರೂ ಪ್ರೋತ್ಸಾಹ ಕೊಟ್ಟರೆ ನಿಧಾನವಾಗಿಯಾದರೂ ಇದು 'ಐಚ್ಛಿಕ ನಾಗರಿಕ ಸಂಹಿತೆ'ಯೊಂದನ್ನು ಸಂವಿಧಾನ ದತ್ತವಾಗಿ ಕೊಡಲು ಒತ್ತಡವಾಗಿ ಪರಿಣಮಿಸಬಹುದೆಂದು ತಿಳಿದಿದ್ದೇನೆ. ಅಂತರ್ಜಾತಿಯ ವಿವಾಹಿತರಿಗೆ ಒಂದು ತಲೆಮಾರಿಗೆ ಮಾತ್ರ ನೌಕರಿಯಲ್ಲಿಯೂ ಮತ್ತು ಅವರ ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿಯೂ ಮೀಸಲಾತಿಯನ್ನು ಕೊಡಬಹುದು. ಈ ದಿಸೆಯಲ್ಲಿ ಇಡುವ ಸಣ್ಣ ಹೆಜ್ಜೆ ಮೀಸಲಾತಿಯ ಅರ್ಥವನ್ನೇ ಬದಲಿಸಿ ಪುನರ್ ವ್ಯಾಖ್ಯಾನ ಮಾಡುತ್ತದೆ. ಕರ್ನಾಟಕದಾದ್ಯಂತ ಅಸಂಘಟಿತರಾಗಿ ಚದುರಿರುವ ಈ ಜಾತ್ಯತೀತರಿಗೆ ಪ್ರೋತ್ಸಾಹವನ್ನೂ ಹೊಸ ಹುರುಪನ್ನೂ ನೀಡುತ್ತದೆ. ಕರ್ನಾಟಕದಲ್ಲಿ ಅವ್ಯಕ್ತವಾಗಿ ನಡೆಯುತ್ತಿರುವ ಜಾತ್ಯತೀತ ಆಂದೋಳನಕ್ಕೆ ಅಧಿಕೃತ ಸಮ್ಮತಿ ದೊರಕಿದಂತಾಗುತ್ತದೆ. ★

('ಒಲವು' ಪತ್ರಿಕೆಯ ಸಾಭಾರ)

೪೧ ನೇ ಪುಟದಿಂದ

ಆನಂದ ಅವರಿಗಾಗುತ್ತಿತು. ಉಪನಿಷದ್‌ನಲ್ಲಿ ಹೇಳಿದೆ: "ಮಾತೃದೇವೋಭವ. ಪಿತೃದೇವೋಭವ, ಆಚಾರ್ಯದೇವೋಭವ, ಅತಿಥಿದೇವೋಭವ" – ಈ ಪರಿಭಾಷೆಯಲ್ಲಿ ಹೇಳುವುದಾದರೆ ಪಂಡಿತಜಿ 'ಲೋಕದೇವ' ಆಗಿದ್ದರು. ಜನರೇ ಅವರ ದೇವರಾಗಿದ್ದರು ಮತ್ತು ಜನರನ್ನು ನೋಡಿ ಅವರ ಹೃದಯ ತುಡಿಯುತ್ತಿತ್ತು. ಇಂಥ ಮನುಷ್ಯನು ದೇಹ ತ್ಯಾಗ ಮಾಡಿ ಹೋಗುವನಾದರೂ ಎಲ್ಲಿಗೆ? ಅವನು ಲೋಕಾತ್ಮನಾಗುವನು, ಜನರಲ್ಲಿಯೇ ಇರುವನು.

(ಮೈತ್ರಿ ಸಾಭಾರ) – ಅನು : **ಸು. ಕೌ.**

ಪ್ರಜಾಪ್ರಭುತ್ವ ಹಾಗೂ ಮತದಾನ

–ಎಸ್. ಎನ್. ಸಿಂಹ

ಭಾರತವು ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ ಎಂಬುದು ಸರ್ವವಿದಿತ. ಆದರೆ ಈ ಪ್ರಜಾತಂತ್ರದ ಪರಿಕಲ್ಪನೆಯು ಪರಕೀಯರ ಕೊಡುಗೆಯೆಂಬ ತಿಳುವಳಿಕೆಯು ಮಾತ್ರ ತಪ್ಪೆಂದು ಹೇಳದೆ ವಿಧಿಯಿಲ್ಲ. ಪ್ರಜಾಪ್ರಭುತ್ವದ ಗಣರಾಜ್ಯದ ಪ್ರಾಯೋಗಿಕತೆಯು ಭಾರತದಲ್ಲಿ ಇಂದಿಗೆ ಎರಡು ಸಾವಿರದ ಇನ್ನೂರು ವರ್ಷಗಳ ಹಿಂದೆ ಅಂದರೆ ಕ್ರಿಸ್ತಪೂರ್ವ ೨೦೦ವರ್ಷಗಳ ಮೊದಲೇ ಆಗಿಹೋಗಿದೆ ಎಂಬುದು ಇತಿಹಾಸದ ಅಧ್ಯಯನ ಮಾಡಿದವರಿಗೆ ತಿಳಿಯದಿರಲಾರದು.

ಕ್ರಿ.ಪೂ. ೨ ನೇ ಶತಮಾನದಿಂದ ಕ್ರಿ. ಶ. ೪ ನೇ ಶತಮಾನದವರೆಗೆ ಸುಮಾರು ೬೦೦ ವರ್ಷಗಳಷ್ಟು ದೀರ್ಘಕಾಲ ನಮ್ಮ ನಾಡಿನಲ್ಲಿ "ಯೌಧೇಯರು" ಈ ತತ್ವದ ಆಚರಣೆ ನಡೆಸಿದ್ದರೆಂಬುದು ಇತಿಹಾಸದಿಂದ ತಿಳಿದು ಬರುತ್ತದೆ.

ಆದರೆ ಸ್ವಾತಂತ್ರ್ಯಾನಂತರದ ಈ ೫೩ ವರ್ಷಗಳಲ್ಲಿ ಶ್ರೇಷ್ಠ ವ್ಯವಸ್ಥೆಯೆಂದು ಪರಿಭಾವಿಸಲಾದ ಈ ಪ್ರಜಾಪ್ರಭುತ್ವ ಪಥ ಕ್ರಮಿಸಿರುವ ಭ್ರಷ್ಟ ಹಾದಿಯನ್ನು ಕಂಡಾಗ ಸ್ವಲ್ಪಮಟ್ಟಿಗಿನ ಯೋಚನಾಶಕ್ತಿಯುಳ್ಳವರೂ ಕೂಡ ಪ್ರಜಾಪ್ರಭುತ್ವದ ಮೂಲ ತತ್ವಗಳಲ್ಲಿ ನಂಬಿಕೆಯನ್ನು ಕಳೆದುಕೊಳ್ಳುತ್ತಿರುವುದು ಸಹಜವೇ ಆಗಿದೆ. ಆದರೆ ಇದು ರಾಷ್ಟ್ರದ ಹಿತದೃಷ್ಟಿಯಿಂದ ಭೀತಿದಾಯಕವಾಗಿದೆ.ಆಂಧ್ರದ ನಕ್ಸಲೀಯರೂ, ತಮಿಳು ಪ್ರತ್ಯೇಕತಾವಾದಿಗಳೂ, ಪಂಜಾಬದ ಉಗ್ರವಾದಿಗಳೂ, ಕಾಶ್ಮೀರದ ಭಯೋತ್ಪಾದಕರೂ ಈ ಮಾತಿಗೆ ಜ್ವಲಂತ ಉದಾಹರಣೆಗಳಾಗಿದ್ದಾರೆ. ಯಾಕೆ ಹೀಗೆ? ನಾವು ಎಲ್ಲಿ ತಪ್ಪುತ್ತಿದ್ದೇವೆ?

ಪ್ರಜಾತಂತ್ರದ ಮೂಲಾಧಾರಗಳಲ್ಲಿ "ಜನಪ್ರತಿನಿಧಿ ಆಯ್ಕೆಯು" ಬಹುಮುಖ್ಯವಾದುದು ಹಾಗೂ ಈ ಆಯ್ಕೆಯ ಪ್ರಕ್ರಿಯೆಯ ಮೂಲಾಂಶವು ಮತದಾನವೆಂಬುದನ್ನು ಮರೆಯಲಾಗದು. ಮತದಾನ ಒಂದು ಪವಿತ್ರವಾದ ಕರ್ತವ್ಯ, ಹಕ್ಕು ಎಂಬಂಥ ಮಾತುಗಳಿಂದ ಅದನ್ನು ವೈಭವೀಕರಿಸಲಾಗಿದೆ. ಅದೀಗ ತೀರ ಹಾಸ್ಯಾಸ್ಪದವೆನಿಸುವ ಮಟ್ಟಿಗೆ ಹಳಸಲಾಗಿದೆ.

ದೇವರು ಇರುವವರೆಗೂ ದೇವಸ್ಥಾನವು ಪರಿಶುದ್ಧವಾಗಿರುತ್ತದೆ. ದೇವರ ಜಾಗದಲ್ಲಿ ಸೈತಾನನು ನಿಂತಾಗ ಅದರ ಪಾವಿತ್ರ್ಯತೆ ಉಳಿದೀತಾದರೂ ಹೇಗೆ ?

ಸ್ವಾತಂತ್ರ್ಯಾನಂತರದ ಆರಂಭದ ದಿನಗಳಲ್ಲಾದರೆ ಬಹುಮಟ್ಟಿಗೆ ದಕ್ಷ ಜನ ಪ್ರತಿನಿಧಿಗಳಿದ್ದರು. ಅವರಲ್ಲಿ ಆದರ್ಶಗಳಿದ್ದವು, ಉನ್ನತ ಮೌಲ್ಯಗಳಿದ್ದವು, ಸರ್ವೋದಯದ ಗುರಿಗಳಿದ್ದವು. ನೈತಿಕತೆ ಪ್ರಧಾನವಾಗಿತ್ತು ಮತ್ತು ಇಂಥ ಅಂಶಗಳ ಮೇಲಿಂದ ಅವರ ಆಯ್ಕೆ ನಡೆಯುತ್ತಿತ್ತು.

ಆದರೆ ಇಂದಿನ ಚಿತ್ರ ಪೂರ್ಣ ಬದಲಾಗಿದೆ. ತದ್ವಿಪರೀತವಾಗಿ ಇಂದಿನ ಬಹುತೇಕ ರಾಜಕಾರಣಿಗಳಲ್ಲಿ ಸ್ವಾರ್ಥಲಾಲಸೆ, ಅಧಿಕಾರದಾಹ, ತಂತಮ್ಮ ಗುಂಪಿನ ಹಿತರಕ್ಷಣೆ ಹಾಗೂ ಅಧಿಕಾರಕ್ಕಾಗಿ ಎಂತಹ ದುರ್ಮಾರ್ಗವನ್ನಾದರೂ ಅವಲಂಬಿಸುವ ಪ್ರವೃತ್ತಿ ಕಂಡುಬರುತ್ತಿದೆ. ರಾಜಕಾರಣ ಇಂದು ಹಣ ಮಾಡುವ ಒಂದು ಉತ್ತಮ ದಂಧೆಯಾಗಿದೆ ಮತ್ತು ಮತದಾನವು ಪೀತಪತ್ರಿಕೆಗಳಲ್ಲಿ ಬಳಸಲಾದ ಶಬ್ದಗಳಲ್ಲಿ ತಿಳಿಸಬೇಕಾದಂತಹ ಅಂಶಗಳನ್ನವಲಂಬಿಸಿ ನಡೆಯುತ್ತದೆ.

ಈ ನಿಟ್ಟಿನಲ್ಲಿ ಚಿಂತಿಸಿದಾಗ ಮತ ನೀಡುವುದಕ್ಕಿಂತ ಜಾತಿ, ಹಣ, ಪ್ರಭಾವೀ ವ್ಯಕ್ತಿಗಳ ಪ್ರಭಾವ ಇವುಗಳ ಆಮಿಷಕ್ಕೊಳಗಾಗಿ ಮತ ಚಲಾಯಿಸುತ್ತಿರುವ ಇಂದಿನ ಮತದಾರನನ್ನು ಋಜುಮಾರ್ಗಕ್ಕೆ ತರಲು ಶಿಕ್ಷಣದ ಅವಶ್ಯಕತೆಯಿದೆ. ಅನಕ್ಷರತೆಯೂ, ಬಡತನವೂ ಹೆಚ್ಚಿರುವ ಕ್ಷೇತ್ರಗಳಲ್ಲಿ ಬಹುಕಾಲದಿಂದಲೂ ಬೇರೂರಿರುವ ಒಂದು ಪಕ್ಷ ಮಾತ್ರವೇ ಗೆಲ್ಲುತ್ತಿರುವುದನ್ನು ಕಂಡಾಗ ಈ ಮಾತಿನ ಯಥಾರ್ಥತೆ ತಿಳಿಯುತ್ತದೆ. ರಾಜಕಾರಣಿಗಳೇಕೆ ಋಜು ಶಿಕ್ಷಣದತ್ತ ಒಲವು ಹೊಂದಿಲ್ಲ? ಉತ್ತರ ಸ್ಪಷ್ಟ. ಅವರಿಗೆ ಮತದಾರರನು ಒಮ್ಮೆ ತಿಳುವಳಿಕಸ್ಥನಾಗಿಬಿಟ್ಟರೆ ತಮ್ಮೆಲ್ಲ ಅಟಾಟೋಪಗಳಿಗೆ ಕಡಿವಾಣ ಬೀಳುತ್ತದೆಂದು.

ಸರಿಯಾದ ಶಿಕ್ಷಣವು ಮತದಾರನಿಗೆ ಹೇಗೋ ಹಾಗೇ ಉಮೇದುವಾರನಿಗೂ ಕೂಡ ಅಗತ್ಯ. ಜನಪ್ರತಿನಿಧಿಗೆ ಕೂಡ ಒಂದು ಮಟ್ಟದ ಶಿಕ್ಷಣವನ್ನು ಕಡ್ಡಾಯ ಮಾಡಬೇಕು. ಹಾಗೂ ಆತನ ನಿರಪರಾಧಿತ್ವದ ಹಿನ್ನೆಲೆಯನ್ನು ಸಾಬೀತು ಮಾಡಬೇಕು. ಹಾಗಾದಾಗ ಕೊಂಚ ಯೋಗ್ಯರು ಈ ಕ್ಷೇತ್ರಕ್ಕೆ ಬರುವಂತಾಗುತ್ತದೆ.

ಐದು ವರ್ಷಗಳ ಅವಧಿಗೆ ಪ್ರತಿನಿಧಿಯನ್ನು ಆಯ್ಕೆ ಮಾಡಿಬಿಟ್ಟರೆ ಆತನು ಅಭಿವೃದ್ಧಿ ಪೂರಕ ಕೆಲಸಗಳಾವುದನ್ನೂ ಮಾಡದೆ ನಿಷ್ಕ್ರಿಯನಾಗಿದ್ದಲ್ಲಿ ಅಥವಾ ಕುಕಾರ್ಯಗಳನ್ನು ಮಾಡಿದಲ್ಲಿ ಯಾವುದೇ ಹಂತದಲ್ಲಿ ಕೂಡ ಆತನನ್ನು ಅಧಿಕಾರದಿಂದ ವಾಪಸು ಇಳಿಸುವ ಅವಕಾಶ ಮತದಾರರಿಗೆ ಇರಬೇಕು. ಇದರಿಂದ ಜನಪ್ರತಿನಿಧಿಯ ಸರ್ವಾಧಿಕಾರಿ ಮನೋಭಾವಕ್ಕೆ ಕಡಿವಾಣ ಬೀಳುವು

ದಲ್ಲದೆ, ಅಭಿವೃದ್ಧಿ ಕಾರ್ಯಗಳು ಅನಿವಾರ್ಯವಾಗಿ ನಡೆಯುವಂತಾಗುತ್ತದೆ. ಅಥವಾ ಅದಕ್ಕೂ ಮುನ್ನವೇ ಮತಪತ್ರದಲ್ಲಿ ಯಾರಿಗೂ ಮತ ನೀಡದ ಸ್ವಾತಂತ್ರ್ಯವನ್ನು ಮತದಾರನಿಗೆ ನೀಡಿರಬೇಕು. ಇದರಿಂದಾಗಿ ಕಡಿಮೆ ಅಯೋಗ್ಯ ನನ್ನು ಆಯ್ಕೆ ಮಾಡುವ ಅನಿವಾರ್ಯತೆ ನೀಗುತ್ತದೆ ಮಾತ್ರವಲ್ಲದೆ ಅದು ಪ್ರಜಾಪ್ರಭುತ್ವದ ನೈಜ ಒರೆಗಲ್ಲಾಗುತ್ತದೆ. ಅಷ್ಟೇ ಅಲ್ಲದೆ ಈಗಿರುವಂತೆ ಬಹುಮತವನ್ನು ಕಡೆಗಣಿಸದೆ, ಚಲಾಯಿತ ಮತಗಳಲ್ಲಿ ಶೇಕಡಾ ೫೦ ಕ್ಕೂ ಹೆಚ್ಚಿನ ಮತಗಳಿಸಿದ ಅಭ್ಯರ್ಥಿಯನ್ನು ಮಾತ್ರವೇ ವಿಜಯಿಯೆಂದು ಪರಿಗಣಿಸ ಬೇಕು. ಒಂದು ಪಕ್ಷ 'ಯಾರಿಗೂ ಮತವಿಲ್ಲ'ದ ಕಾಲಮಿಗೇ ಹೆಚ್ಚು ಮತಗಳು ಬಿದ್ದಂತಹ ಸಂದರ್ಭದಲ್ಲಿ ಅಲ್ಲಿನ ಯಾವತ್ತೂ ಉಮೇದುವಾರರನ್ನು ಬದಲಿಸಿ ಮರು ಚುನಾವಣೆ ನಡೆಸಬೇಕು. 'ಯಾರಿಗೂ ಮತವಿಲ್ಲ' ಎಂಬ ಕಾಲಮಿನ ಸ್ವಾತಂತ್ರ್ಯ ನೀಡಿದಾಗ ಮತದಾನವನ್ನು ಕಡ್ಡಾಯ ಮಾಡಬಹುದಾದ ಉತ್ತಮ ಅವಕಾಶ ಸಿಗುತ್ತದೆ.

ಇವುಗಳ ಅನುಕೂಲಕ್ಕಾಗಿ ಗಲ್ಲಿಗೆ ನಾಲ್ಕರಂತಿರುವ ಪ್ರಾದೇಶಿಕ ವ್ಯಾಪ್ತಿಯ ಹುಲುಪಕ್ಷಗಳ ಮಾನ್ಯತೆಯನ್ನು ರದ್ದುಮಾಡಿ ದ್ವಿಪಕ್ಷೀಯ ಮಾದರಿಯನ್ನು ಅನುಷ್ಠಾನಕ್ಕೆ ತರಬೇಕು. ರಾಷ್ಟ್ರೀಯ ಹಿತಾಸಕ್ತಿಯ ಮುಂದೆ ಪ್ರಾದೇಶಿಕ ಸಂಕುಚಿತತೆಗಳನ್ನು ದೂರ ಮಾಡಬೇಕಲ್ಲವೆ?

ಹೀಗಾದಾಗ ಚುನಾವಣೆಯಲ್ಲಿ 'ಹಣ'ದ ದುರ್ಬಳಕೆಯನ್ನು ತಪ್ಪಿಸಲು ಆಯೋಗವೇ ಅಭ್ಯರ್ಥಿಗಳ ಪ್ರಚಾರವನ್ನು ಸರ್ಕಾರೀ ವೆಚ್ಚದಲ್ಲಿ ಮಾಡಬಹುದು. ಅಥವಾ ಯಾವುದೇ ಪಕ್ಷಕ್ಕೂ ಶಾಶ್ವತವಾದ ಚುನಾವಣಾ ಚಿಹ್ನೆಗಳನ್ನು ನೀಡತಕ್ಕದ್ದಲ್ಲ. ಪ್ರತಿಬಾರಿ ಹೊಸ ಚಿಹ್ನೆಯ ಮೇಲೆ ಅದರ ಉಮೇದುವಾರಿಕೆ ಇರಬೇಕು.

ಇಷ್ಟೆಲ್ಲ ಸುಧಾರಣೆಗಳನ್ನು ತಂದಾಗ ಮಾತ್ರ ಪ್ರಜಾಪ್ರಭುತ್ವವು ಉಳಿದು ಬೆಳೆಯಲು ಸಾಧ್ಯ. ಆದರೆ ಇದುವರೆಗೂ ಅಧಿಕಾರ ಸುಖವನ್ನು ಅನುಭವಿ ಸುತ್ತಾ ಬಂದಿರುವ ಭ್ರಷ್ಟ ರಾಜಕಾರಣಿಗಳು ಇದಕ್ಕೆ ಬೆಂಬಲ ನೀಡುವ ಸಾಧ್ಯತೆ ಕಡಿಮೆ. ಆದ್ದರಿಂದ ಪ್ರಜ್ಞಾವಂತರು ಒಗ್ಗೂಡಿ ಮೇಲ್ಕಂಡ ಅಂಶಗಳ ಅಥವಾ ಇನ್ನೂ ಸುಧಾರಿತ ರೂಪಗಳ ಬಗೆಗೆ ಚಿಂತಿಸಿ ಅವುಗಳ ಅನುಷ್ಠಾ ನಕ್ಕೆ ಯತ್ನಿಸಬೇಕು.

ಪ್ರಭುತಂತ್ರದ ಕೆರಿಗೆ ಕಣದಿಂದ ರಾಜ ಮತ್ತು ಅವನ ಪರಿವಾರವನ್ನು ಮಾತ್ರ ಸಾಕುತ್ತಿದ್ದರೆ, ಪ್ರಜಾತಂತ್ರದಲ್ಲಿ ಅಂಥ ಹಲವು ರಾಜಕಾರಣಿಗಳ ಪರಿ ವಾರಗಳನ್ನು ಸಾಕುವ ಈ ದುಃಸ್ಥಿತಿಗೆ ಕೊನೆಯೇ ಇಲ್ಲವಾಗುತ್ತದೆ. ★

ವೈಚಾರಿಕ ಧಾರಾವಾಹಿ..........

ಸ್ವಾತಂತ್ರ್ಯ : ಸ್ವಯಂಪ್ರೇರಣೆಯ ಕೌಟುಂಬಿಕತೆ

– ದಾದಾ ಧರ್ಮಾಧಿಕಾರಿ

(ದಾದಾ ಧರ್ಮಾಧಿಕಾರಿ ಭಾರತದ ಶ್ರೇಷ್ಠ ಚಿಂತಕರಲ್ಲಿ ಒಬ್ಬರಾಗಿದ್ದರು. ಜೀವನವನ್ನು ವಸ್ತುನಿಷ್ಠೆಯ ದೃಷ್ಟಿಯಿಂದ ನೋಡಿದವರು. ಅದರ ಶತಮಾನೋತ್ಸವದ ಸಂದರ್ಭವನ್ನು ಉಪಯೋಗಿಸಿಕೊಂಡು ಓದುಗರಿಗೆ ಅವರ ವಿಚಾರಪೂರ್ಣ ಅನುಭವದ ಮಾತುಗಳನ್ನು ಇಲ್ಲಿ ಕ್ರಮಶಃ ಕೊಡಲಾಗುತ್ತಿದೆ. ಇದು ಎಂಟನೆಯ ಸರಣಿ. -ಸಂ)

ಮನುಷ್ಯನ ಸ್ವಾತಂತ್ರ್ಯದ ಆಶಯ ಏನು? ಇದರ ಹೂರಣ ಏನು? ಅಟ್ಲಾಂಟಿಕ್ ಚಾರ್ಟರ್‌ನಲ್ಲಿ ರೂಸವೆಲ್ಟ್ ಮತ್ತು ಚರ್ಚಿಲ್ ಸೇರಿ ಚತುಸ್ಸ್ವಾತಂತ್ರ್ಯಗಳನ್ನು ಮಂಡಿಸಿದರು. ಅವು ಎಂಥವು, ಅವು ಯಾವುವು ಎಂಬುದನ್ನು ಆಮೇಲೆ ನೋಡೋಣ. ಆ ಸ್ವಾತಂತ್ರ್ಯದ ಬಗೆಯೇ ಬೇರೆ. ಅಂದರೆ ಅದು ಇತರರಿಂದ ನಾವು ಪಡೆಯಬೇಕಾದ ಸ್ವಾತಂತ್ರ್ಯ. ಅಭಾವದಿಂದ ಮುಕ್ತಿ, ಭಯ ಮುಕ್ತಿ. ಈ ಮುಕ್ತಿ, ಈ ಸ್ವಾತಂತ್ರ್ಯ ಇತರರು ನಮಗೆ ಕೊಡಬೇಕಾದ್ದು. ಆದರೆ ನಾನು ಈಗ ಹೇಳುವ ಸ್ವಾತಂತ್ರ್ಯ ಬೇರೆ. ಇದು ಸ್ವಯಂಸಿದ್ಧ ಸ್ವಾತಂತ್ರ್ಯ. ಜವಾಬದಾರಿ ಮತ್ತು ಹೊಣೆಗಾರಿಕೆ ಎಂದೆವಲ್ಲ ಅದು. ಸಾಮಾಜಿಕತೆಯೇ ಸಮಾಜದ ತಳಹದಿ. ಆದರೆ ಸಮಾಜದ ಸಂಘಟನೆ ಎಂಬುದು ಬೇರೆ. ಸಮಾಜವನ್ನು ಸಂಸ್ಥೆಯಾಗಿ ಸಂಘಟಿಸಬೇಕೆ, ರಾಜ್ಯವಾಗಿಯೆ? ಸುಸಂಘಟಿತ ಸಮಾಜ ನಮಗೆ ಏನು ನೀಡಬೇಕು? ಈ ಮಾತುಗಳು ಬೇರೆ. ನಾನು ಹೇಳುವುದು ಮೂಲಭೂತ ಸ್ವಾತಂತ್ರ್ಯದ ಮಾತು. ಮನುಷ್ಯರ ಮನುಷ್ಯತ್ವ, ಪೌರುಷಗಳ ಮಾತು. ಪೌರುಷದಲ್ಲಿ ಗಂಡು ಹೆಣ್ಣು ಎರಡೂ ಸೇರಿವೆ. ಭಾಷೆಯೇ ಹಾಗೆ. ಪುಲ್ಲಿಂಗದಲ್ಲಿಯೆ ವ್ಯವಹಾರ ನಡೆಯುತ್ತದೆ. ಮನುಷ್ಯ ಮರ್ತ್ಯ ಎಂದರೆ ಅದರಲ್ಲಿ ಹೆಂಗಸೂ ಬಂದಳು. ಈ ಪೌರುಷದ ಸ್ವಾತಂತ್ರ್ಯ ಜವಾಬದಾರಿ. ಕೇವಲ ನನ್ನ ಕರ್ಮಕ್ಕೆ ಮಾತ್ರವಲ್ಲ, ನೆರೆಯವರ ಕರ್ಮಕ್ಕೂ ನಾನು ಜವಾಬದಾರ. ಇದನ್ನು ನೆರೆಹೊರಿಕೆಯ ಧರ್ಮ ಎನ್ನುತ್ತೇವೆ. ಈ ಸ್ನೇಹವನ್ನು ಪ್ರತಿವೇಶಿ ಧರ್ಮ ಎನ್ನುತ್ತಾರೆ. ನೆರೆಹೊರಿಕೆಯ ಭಾವನೆ ಇಲ್ಲವೋ ನೆರೆಹೊರೆ ಇದ್ದರೂ ಇಲ್ಲ.

ಈ ಮಾತನ್ನು ನಾನು ಒತ್ತಿ ಹೇಳುವುದಕ್ಕೆ ಕಾರಣ ನಾವು ಈಗ ಸಮಾಜ ಎನ್ನುತ್ತೇವಲ್ಲ ಅದರ ಹೆಸರು ನಿಜವಾಗಿ ಆಗಬೇಕಿತ್ತು ನೆರೆಹೊರೆ ಎಂದು. ಒಬ್ಬರ ಮಗ್ಗುಲಲ್ಲಿ ಒಬ್ಬರು ಇದ್ದರೆ ಆಯಿತೆ? ಇದು ಸಾನ್ನಿಧ್ಯ. ಇಷ್ಟರಿಂದ ನೆರೆಹೊರೆಯಾಗುವುದಿಲ್ಲ. ಅಕ್ಕ-ಪಕ್ಕದಲ್ಲಿ ಇರುವುದು ಬೇರೆ, ನೆರೆಹೊರೆ

ಆಗುವುದು ಬೇರೆ. ಹೋಟೆಲಿನಲ್ಲಿ ಎರಡು ಕೊಠಡಿ ಇವೆ. ಒಂದರಲ್ಲಿ ನಾನು, ಇನ್ನೊಂದರಲ್ಲಿ ಇನ್ನೊಬ್ಬರು. ಪರಿಚಯವಿಲ್ಲ. ಹೊರಗಡೆ ಹಲಗೆಯ ಮೇಲೆ ಹೆಸರು ಬರೆದಿದೆ. ಅದನ್ನು ಓದಲೇ ಇಲ್ಲ. ವಡವಿ ಎಲ್ಲಿದಾರೆ ಎಂದು ಯಾರೋ ಬಂದು ಕೇಳುತ್ತಾರೆ. ನನಗೆ ಗೊತ್ತಿಲ್ಲ ಎನ್ನುತ್ತೇನೆ. ನನ್ನ ಕೊಠಡಿಯ ಸಂಖ್ಯೆ ೮. ಅವರದು ೭ ಎಂದು ಎನ್ನುತ್ತಾರೆ ಅವರು. ನನ್ನದರ ಪಕ್ಕದ್ದೇ ೭ನೇ ಕೊಠಡಿ. ಅದರಲ್ಲಿ ಯಾರಿದಾರೆಯೋ ನನಗೆ ತಿಳಿಯದು. ನಮಗೆ ಬಾಂಧವ್ಯ ಇಲ್ಲ. ನಾವು ಪ್ರವಾಸಿಗಳು, ಈ ಜಗತ್ತೇ ಒಂದು ಧರ್ಮಶಾಲೆ, ಹಕ್ಕಿಗಳು ರಾತ್ರಿ ಒಂದು ಗೂಡಿನಲ್ಲಿ ಸೇರಿಕೊಳ್ಳುವಂತೆ ನಾವೂ. ಬೆಳಗಾದ ಮೇಲೆ ಯಾರಿಗೆ ಯಾರೋ! ಇರುಳಿನ ಗವಿ ನಿಶಾ ನೀಡಂ. ಅಂದರೆ ನಮಗೆ ಸಂಬಂಧ – ಬಾಂಧವ್ಯ ಇಲ್ಲದಾಯಿತು. ಆದರೆ ಸಂಬಂಧವಿಲ್ಲದೆ ಸಾಮಾಜಿಕತೆ ಇಲ್ಲ. ಎಂಥ ಸಂಬಂಧ? ಜವಾಬದಾರಿಯ ಸಂಬಂಧ. ಈ ಸಂಬಂಧಕ್ಕೆ ಯಾವುದು ಪ್ರೇರಣೆ? ಎಲ್ಲಿಯವರೆಗೆ ಜವಾಬದಾರಿ? ನನ್ನ ಪ್ರಾಣಕ್ಕೆ ನೆರೆಯವನು ಜವಾಬದಾರ, ನೆರೆಯವನ ಪ್ರಾಣಕ್ಕೆ ನಾನು ಜವಾಬದಾರ. ಇಬ್ಬರೂ ಪರಸ್ಪರ ಜವಾಬದಾರರು. ಪ್ರತಿಯೊಬ್ಬನೂ ಇನ್ನೊಬ್ಬನ ಅಭಿಭಾವಕ ಸಂರಕ್ಷಕ. ಪೋಲೀಸು ಏನು? ನಮ್ಮ ಸಂರಕ್ಷಣೆಯ ಸಂಘಟಿತ ರೂಪ. ಅದರ ಪ್ರತಿನಿಧಿ. ಇದರಿಂದ ಏನು ಪ್ರಯೋಜನ? ನನ್ನ ನೆರೆಯವರು ನನ್ನನ್ನು ಹೊಡೆಯುವಾಗ ಪೋಲೀಸು ಬರುತ್ತಾರೆಯೆ? ಅವನು ಹೊಡೆದ ಎಂದು ದೂರು ಕೊಟ್ಟಮೇಲೇ ಪೋಲೀಸು ಬರಬೇಕಾದರೆ. ಮೊದಲೇ ಬರುವುದು ಸಾಧ್ಯವಿಲ್ಲ. ಪೋಲೀಸರ ದೋಷವಲ್ಲ ಅದು. ನನ್ನ ನೆರೆಯವರು ನನಗೆ ಕೊಡುವ ಸಂರಕ್ಷಣೆಯೇ ನಿಜವಾದ ಸಂರಕ್ಷಣೆ. ಇದು ಪರಸ್ಪರಾವಲಂಬಿತ ವಿಮೆ. ಈ ವಿಮೆಗೆ ಏಜೆಂಟು ಇಲ್ಲ. ಯಾವ ಸಂಸ್ಥೆಯೂ ಇಲ್ಲ. ನನ್ನ ನೆರೆಹೊರಿಕೆಯೇ, ಸಮಾಜವೇ ವಿಮಾಸಂಸ್ಥೆ. ಯಾರ ಜೀವಕ್ಕೆ ಯಾರು ಭರವಸೆ ಕೊಡಬೇಕು? ಪರಸ್ಪರ ಆಶ್ವಾಸನ!

ಬೈಬಲಿನಲ್ಲಿ ಒಂದು ವಾಕ್ಯ ಇದೆ : ನೀವು ಸದಸ್ಯರು. ಯಾವ ಸಂಸ್ಥೆಯಲ್ಲೂ ಅಲ್ಲ, ಪರಸ್ಪರ. ನೀನು ನನ್ನ ಸದಸ್ಯ, ನಾನು ನಿನ್ನ ಸದಸ್ಯ. ನಾವು ಒಬ್ಬರಿಗೊಬ್ಬರು ಜವಾಬದಾರರು, ಇಬ್ಬರೂ ಸೇರಿ ನೆರೆಹೊರೆಗೆಲ್ಲಾ ಜವಾಬದಾರರು. ಹೀಗೆಂದರೆ ಈ ಪರಸ್ಪರ ಹೊಣೆಗಾರಿಕೆ ಸಾಮುದಾಯಿಕ ಹೊಣೆಗಾರಿಕೆ ಆಯಿತು. ಈ ಯಾವ ಮಿಲಿಟರಿ ಒಪ್ಪಂದದಿಂದಲೂ ಬಂದದ್ದಲ್ಲ. ಮಿಲಿಟರಿ ಒಪ್ಪಂದದಿಂದ ಬಂದ ಸುರಕ್ಷಿತತೆ ನಿಜವಾದುದಲ್ಲ. ಮನುಷ್ಯ ಸ್ವರ

ಕ್ಷಿತನಾದಾಗಲೇ ಸುರಕ್ಷಿತ. ಸ್ವರಕ್ಷಣೆ ಹೇಗೆ ಸಾಧ್ಯ? ಎಲ್ಲರೂ ಸೇರಿ ಪರಸ್ಪರ ರಕ್ಷಣೆ ಮಾಡಿದಾಗಲೇ ಸ್ವರಕ್ಷಣೆ. ಈ ಪಾರಸ್ಪರಿಕತೆಯೆ ಜವಾಬದಾರಿಯ ಉದ್ದೇಶ. ಇದರಲ್ಲಿ ಎರಡೂ ಕಡೆ ನಿರಪೇಕ್ಷೆ. ನೀವು ಜವಾಬದಾರಿ ತೆಗೆದುಕೊಂಡರೆ ನಾವೂ ತೆಗೆದುಕೊಳ್ಳುತ್ತೇವೆ ಎಂಬ ಕರಾರು ಇಲ್ಲ. ನೀವು ನನ್ನ ಜವಾಬದಾರಿ ವಹಿಸಿ ಅಥವಾ ಬಿಡಿ. ನಾನೇನೋ ನಿಮ್ಮದನ್ನು ವಹಿಸಿಕೊಳ್ಳುತ್ತೇನೆ. ಈ ಅಭಿಕ್ರಮ, ಮೊದಲಿಡುವ ಮಾತು ನನ್ನದು. ನೀತಿಯಲ್ಲಿ ಯಾರದ ಅಭಿಕ್ರಮ? ತನ್ನದೇ. ಜನರಲ್ಲಿ ಈಗ ಸ್ವಯಂಪ್ರೇರಣೆ ಇಲ್ಲ ಎಂದು ಸರಕಾರ ದೂರುತ್ತಿದೆ. ಎಲ್ಲರೂ ಹೇಳುತ್ತಾರೆ. ನಾಗರಿಕರಿಗೆ ಅಭಿಕ್ರಮ ಇರಬೇಕು. ನಾಗರಿಕನ ವಿಭೂತಿ ಅಭಿಕ್ರಮ ಸಂಪನ್ನವಾಗಬೇಕು. ಅಭಿಕ್ರಮ ಇಲ್ಲದ ನಾಗರಿಕ ಇರಬಾರದು. ಎಲ್ಲಿ ನಾಗರಿಕ ಇದನ್ನು ನಿರ್ವಹಿಸುತ್ತಾನೆಯೋ ಅಲ್ಲಿ ಕರ್ತೃತ್ವ ಬರುತ್ತದೆ, ಪ್ರೇರಣೆ ಇರುತ್ತದೆ. ಪ್ರವೃತ್ತಿ – ಕರ್ತೃತ್ವ ಎರಡೂ ನಾಗರಿಕನಲ್ಲಿ ಇದ್ದರೆ ಅದು ಪ್ರಜಾತಂತ್ರ. ಅಭಿಕ್ರಮ ಜನರಲ್ಲಿ ಇರಬೇಕು ಅದು ಬರಬೇಕೆಲ್ಲಿಂದ? ಜವಾಬದಾರಿಯಿಂದ ಬರುತ್ತದೆ. ಹೊಣೆಗಾರಿಕೆಯಿದ್ದರೂ ನಿರಪೇಕ್ಷವಾಗಿರಬೇಕು. ನೀನು ಮಾಡಿದರೆ ನಾನು ಎಂದರೆ ಸಾಗದು ಇದನ್ನು ಅರಿತುಕೊಳ್ಳುವುದು ಬಹಳ ಅಗತ್ಯ. ಇತರರು ಏನೂ ಮಾಡದಿದ್ದ ನಾವೂ ಏನೂ ಮಾಡಬೇಕಾಗಿಲ್ಲ ಎಂದು ನಾವು ಯಾವಾಗಲೂ ತಿಳಿಯುತ್ತೇವೆ. ನಮ್ಮ ಕರ್ತವ್ಯ ಹೀಗೆ ಕೊನೆಗಾಣುವುದು ಎಲ್ಲಿ? ಎಲ್ಲಿ ನಮ್ಮ ಸಂಬಂಧ ಬರೀ ಔಪಚಾರಿಕವೋ ಅಲ್ಲಿ. ಎಲ್ಲಿ ಸಂಬಂಧವೋ, ಸಂಸ್ಥಾತ್ಮಕವೋ ಅಲ್ಲಿ.

ಆ ಮನುಷ್ಯ ಬಂದಿದ್ದ. ಎಲ್ಲರನ್ನೂ ಕಾಣಲು ಬಂದಿದ್ದ. ನೀವು ಏಕೆ ಹೋಗಲಿಲ್ಲ? 'ನನ್ನನ್ನು ಕರೆಯಲಿಲ್ಲ' ಎನ್ನುತ್ತೀರಿ. ಆ ಮನುಷ್ಯ ನಿಮ್ಮ ಡಬ್ಬಾದಲ್ಲೇ ಪ್ರವಾಸ ಮಾಡುತ್ತಿದ್ದಾನೆ. ಅವನಿಗೆ ಬಾಯಾರಿದೆ. ಹತ್ತಿರ ನೀರು ಇಲ್ಲ. ನಿಮ್ಮ ನೀರಿನ ಡಬ್ಬಿ ತುಂಬಿದೆ. ನೀವು ಅವನಿಗೆ ನೀರು ತೆಗೆದುಕೊಳ್ಳಿ ಎಂದು ಹೇಳಬಾರದಿತ್ತೆ? 'ನನಗೆ ಪರಿಚಯ ಆಗಿರಲಿಲ್ಲ'. ಇದು ಔಪಚಾರಿಕ ಸಂಬಂಧ. ಇದರಲ್ಲಿ ಶಿಷ್ಟಾಚಾರ ಬರುತ್ತದೆ. ಇದೇ ಬೇರೆ, ಸಜ್ಜನತೆಯೆ ಬೇರೆ. 'ನನ್ನ ಹತ್ತಿರ ನೀರು ಇದೆ. ನಿಮಗೆ ಬೇಕೆ?' ಎಂದು ಕೇಳುವುದು ಸಜ್ಜನತೆ, ಸಭ್ಯತೆ. ಇದಕ್ಕೆ ಎಲ್ಲಿಯದು ಪ್ರೇರಣೆ? ಮನುಷ್ಯನ ಸ್ವಾಭಾವಿಕ ಸಹಾನುಭೂತಿಯದು. ಈ ಸಮವೇದನೆಯೆ ದಯಾ ಸುಧೆ. ನಿಮ್ಮ ಪಕ್ಕದ ಮನೆಗೆ ಬೆಂಕಿಬಿದ್ದರೆ ನನಗೆ ಪರಿಚಯ ಇಲ್ಲ – ಎನ್ನುತ್ತೀರಾ? ಮದುವೆಗೆ ಏಕೆ ಬರಲಿಲ್ಲ ಎಂದರೆ ಕರೆದಿರಲಿಲ್ಲ ಎನ್ನಿ. ಅದು ಸರಿ. ಅದು ಔಪಚಾರಿಕ ಸಮಾರಂಭ. ಬದುಕು ಸಮಾರೋಹಾತ್ಮಕವಲ್ಲ, ಔಪಚಾರಿಕವಲ್ಲ.

ಬದುಕು ವಾಸ್ತವಿಕ. ಬಾಳಿನಲ್ಲಿ ಉತ್ಕಟತೆ ಇದೆ. ಔಪಚಾರಿಕತೆಯಿಂದ ಉತ್ಕಟತೆಯ ಕಡೆಗೆ ಒಯ್ಯುವುದೇ ಕ್ರಾಂತಿ. ಸಂಸ್ಥಾತ್ಮಕ ಔಪಚಾರಿಕತೆಯಿಂದ ಪಾರ್ಮಿಕತೆ ಕಡೆಗೆ ಒಯ್ಯುವುದೇ ಕ್ರಾಂತಿ. ಇದು ಸಮುದಾಯಕ್ಕೂ ಕುಟುಂಬಕ್ಕೂ ಇರುವ ಅಂತರ. ★

ವಿಚಾರ ದೀಪ್ತಿ...............

ನಾವೀಗ ಬಯಕೆಗಳನ್ನೆಲ್ಲ ಪೂರೈಸುವ ಮೂಲಕ ಅವುಗಳನ್ನು ತಣಿಸ ಹೊರಟಿದ್ದೇವೆ. ಅದರ ಫಲವಾಗಿ ಭೂ ನಿಕ್ಷೇಪ ಶೀಘ್ರ ನಾಶ ವಾಗುತ್ತಿದೆ. ಉಡಲೆಂದು ಹತ್ತುಸಾವಿರ ಸೀರೆಗಳನ್ನು ಇಟ್ಟುಕೊಳ್ಳು ವುದು ಆ ವ್ಯಕ್ತಿಗೆ ಅಸಹ್ಯವೆನಿಸದಿದ್ದರೆ, ಜನಕ್ಕಾದರೂ ಆಕ್ರೋಶ ವಾಗದಿದ್ದರೆ ಅಂಥ ಭೋಗಲಾಲಸೆಗೇ ಸಾಧುವೆನಿಸುತ್ತವೆ. ನಮ್ಮೆಲ್ಲ ರಲ್ಲಿರುವ ಭೋಗಾಕಾಂಕ್ಷೆ ಅದನ್ನು ತಾಳಿಕೊಳ್ಳುತ್ತದೆ. ಇದರ ವಿರುದ್ಧ ವಾಗಿ ಬಂಡಾಯವೇಳದಿದ್ದರೆ ಈಗ ನಡೆಯುತ್ತಿರುವ ಬೃಹತ್ ಪ್ರಮಾಣದ ಭ್ರಷ್ಟಾಚಾರವೇ ಶಿಷ್ಟಾಚಾರವಾಗುತ್ತದೆ. ಪರಿಸರದ ಸಂರಕ್ಷಣೆ ಭೂಮಿಯ ಸಂಪತ್ತಿನ ಮಿತವಾದ ಬಳಕೆಯೇ ಆಗಿರು ವುದರಿಂದ ಅದು ಒಟ್ಟಾರೆ ಮಾನವಸಮೂಹದ ಬಯಕೆಯ ನಿಯಂ ತ್ರಣವೂ ಆಗಬೇಕಾಗಿದೆ. ಜನನ ನಿಯಂತ್ರಣವನ್ನು ಬಲಿಷ್ಠ ಸರ್ಕಾ ರದ ಬಿಗಿಮುಷ್ಟಿ ಸಾಧಿಸಬಹುದು. ಆದರೆ ಈಗ ವ್ಯಾಪಕವಾಗು ತ್ತಿರುವ ದುರಾಸೆಯ ನಿಯಂತ್ರಣವನ್ನು ನಮ್ಮಂಥವರಿಂದ ನಿರೀಕ್ಷಿಸು ವುದು ಸಾಧ್ಯವಿಲ್ಲ.

ಒಂದು ರೀತಿಯಲ್ಲಿ ನಾವೆಲ್ಲರೂ ದುರಾಸೆಯ ಬೆಳವಣಿಗೆಗೆ, ಅದರ ಮಗನಾದ ಭ್ರಷ್ಟಾಚಾರಕ್ಕೆ ಪರೋಕ್ಷವಾಗಿ ವಂತಿಕೆ ಸಲ್ಲಿಸು ತ್ತಿದ್ದೇವೆ. ನಾನು ಮಾಂಸಹಾರಿಯಲ್ಲ. ಆದರೆ ನನಗೆ ಇಪ್ಪತ್ತು ಜೊತೆ ಷೂಗಳು, ಎಪ್ಪತ್ತು ಜೊತೆ ಮೆಟ್ಟುಗಳು ಬೇಕೆಂದರೆ ಆ ಎಲ್ಲಕ್ಕೂ ಚರ್ಮವನ್ನು ಬದುಕಿರುವ ಯಾವ ಪ್ರಾಣಿ ಸಾಯದೆ ಕೊಟ್ಟೀತು ?

—ಸುಜನಾ

 ೮ ನೇ ಪುಟದಿಂದ

ಅತ್ಯಂತ ಸುಲಭವಾದ ಉಪಾಯವೇನೆಂದರೆ ರಾಜಕೀಯ ಕಾಣಿಕೆಗಳ ಬಗ್ಗೆ ಇರುವ ಅಪಾರ್ಥಭೂತತನವನ್ನು ತೆಗೆದುಹಾಕುವುದು. ಆದಾಯ ತೆರಿಗೆ ಕಾನೂನ್ವಯ ರಾಜಕೀಯ ಪಕ್ಷಗಳಿಗೆ ವಂತಿಗೆ ಕೊಡುವ ವಾಣಿಜ್ಯ ಸಂಸ್ಥೆಗಳಿಗೆ ತೆರಿಗೆ ವಿನಾಯ್ತಿಯನ್ನು ಕೊಡಲಾಗುತ್ತದೆ. ಈ ವಿನಾಯ್ತಿ ದೊರೆಯಬೇಕಾದರೆ ಆ ವಾಣಿಜ್ಯ ಸಂಸ್ಥೆ ತನ್ನ ವ್ಯವಹಾರಕ್ಕೆ ಸಂಬಂಧಿಸಿದಂತೆ ವಂತಿಗೆ ಕೊಟ್ಟಿರ ಬೇಕಾಗಿರುತ್ತದೆ. ಈ ವಿನಾಯ್ತಿಯನ್ನು ಕೊಡುವಾಗ ಕಾನೂನು ಒಂದು ಸಂಗತಿಯನ್ನು ಮರೆತಂತಿದೆ. ಅದೇನೆಂದರೆ ಯಾವುದೇ ವಾಣಿಜ್ಯ ಸಂಸ್ಥೆ ಅಂಥ ವಂತಿಗೆಯನ್ನು ಕೊಡುವಾಗ ಯಾವುದಾದರೂ ಪ್ರತಿಫಲಾಪೇಕ್ಷೆ ಇಟ್ಟುಕೊಂಡೇ ಇರುತ್ತದೆ. ಆದ್ದರಿಂದ ಚುನಾವಣೆಗಳಿಗೆ ಹಣ ಒದಗಿಸುವ ಬಗ್ಗೆ ಹೆಚ್ಚು ಪಾರ ದರ್ಶಕವಾದ ಪದ್ಧತಿ ಇರುವಂತೆ ನಾವು ಗುರಿ ಹೊಂದಿರಬೇಕು. ಅಮೇರಿಕಾ ಸಂಯುಕ್ತ ಸಂಸ್ಥಾನವನ್ನು ನಾವು ಅನುಸರಿಸಬಹುದು. ಅಲ್ಲಿ ರಿಪಬ್ಲಿಕ್ ಮತ್ತು ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಗಳು ಎಷ್ಟು ಹಣವನ್ನು ಮತ್ತು ಯಾವ ರೀತಿ ಸಂಗ್ರಹಿಸಿದರು ಎಂಬುದು ನಮಗೆ ಗೊತ್ತಿದೆ. ಭಾರತ ದಲ್ಲಿ ನಾವೇಕೆ ಅಂಥ ಪರಿಸ್ಥಿತಿಯನ್ನುಂಟು ಮಾಡಬಾರದು? ನಿಜ, ಅಲ್ಲಿಯ ಪದ್ಧತಿ ಕೂಡ ದೋಷರಹಿತವಾಗಿಲ್ಲ. ಜಾನ್ ಮ್ಯಾಕ್‌ಕೈನ್ ಎಂಬುವವ ಚುನಾವಣಾನಿಧಿ ಸಂಗ್ರಹಣಾ ಪದ್ಧತಿಯಲ್ಲಿ ಸುಧಾರಣೆಯಾಗಬೇಕೆಂಬ ಸಂಗತಿ ಯನ್ನೇ ಒಂದು ದೊಡ್ಡ ವಿಷಯವನ್ನಾಗಿ ಮಾಡಿದ. ಅಮೇರಿಕಾದ ರಾಜಕೀಯ ಪದ್ಧತಿ ಖಂಡಿತವಾಗಿ ಭಾರತಕ್ಕಿಂತ ಹೆಚ್ಚು ಶುದ್ಧವಾಗಿದೆ. ಆದ್ದರಿಂದ ಚುನಾವಣೆಗಳಿಗೂ ಮತ್ತು ರಾಜಕೀಯ ಪಕ್ಷಗಳಿಗೂ ವ್ಯಕ್ತಿ ಮತ್ತು ಸಂಘ-ಸಂಸ್ಥೆಗಳು ಉದಾರವಾಗಿ ವಂತಿಗೆ ಕೊಡುವುದಕ್ಕೆ ಅವಕಾಶವಿರಬೇಕು. ಅಂಥ ವಂತಿಗೆಗಳು ಆದಾಯ ತೆರಿಗೆಯಿಂದ ವಿನಾಯ್ತಿ ಹೊಂದಬೇಕು. ಈ ಎಲ್ಲ ವಂತಿಗೆಗಳ ಮಾಹಿತಿ ಸಾರ್ವಜನಿಕರಿಗೆ ಗೊತ್ತಾಗಬೇಕು. ಈ ವಿಷಯವನ್ನು ಆಯಾ ವ್ಯಕ್ತಿಯ ಅಥವಾ ಆಯಾ ಸಂಸ್ಥೆಗಳ ಮತ್ತು ರಾಜಕೀಯ ಪಕ್ಷಗಳ ವೆಬ್ ಸೈಟ್‌ನಲ್ಲಿ ಪ್ರಕಟಗೊಳ್ಳಬೇಕು.

ಎರಡನೇಯದಾಗಿ, ರಾಜಕೀಯ ಪಕ್ಷಗಳು ತಮ್ಮ ಲೆಕ್ಕಗಳನ್ನು ಆಡಿಟ್ ಮಾಡಿಸುವುದರ ಮೂಲಕ ವಂತಿಗೆಗಳನ್ನು ಪಡೆಯುವಲ್ಲಿ ಪಾರದರ್ಶಕತೆಯಿರ ವಂತೆ ಮಾಡಬೇಕು. ಇದರಿಂದಾಗಿ ಭಾರತವನ್ನು ಪೀಡಿಸುತ್ತಿರುವ ಕಪ್ಪು ಹಣವೆಂಬ ಭೂತದಿಂದ ಬಿಡುಗಡೆ ಮಾಡಬಹುದು.

ಕೆಲವು ವಾಣಿಜ್ಯ ಸಂಸ್ಥೆಗಳು ತಮ್ಮ ವಂತಿಗೆಗಳ ಬಗ್ಗೆ ರಾಜಕೀಯ

ಪಕ್ಷಗಳಿಗೆ ಗೊತ್ತಾದರೆ ಇನ್ನೂ ಹೆಚ್ಚಿನ ಒತ್ತಡ ತಮ್ಮ ಮೇಲೆ ಬರಬಹುದೆಂದು ಭಾವಿಸಿವೆ. ಇದನ್ನು ತಪ್ಪಿಸುವುದಕ್ಕಾಗಿ ವಾಣಿಜ್ಯ ಸಂಸ್ಥೆಗಳು ತಮ್ಮ ಲೆಕ್ಕಪತ್ರಗಳಲ್ಲಿ ತಾವು ಯಾವ ರಾಜಕೀಯ ಪಕ್ಷಕ್ಕೆ ವಂತಿಗೆ ಕೊಟ್ಟಿವೆಯೋ ಆ ಪಕ್ಷದ ಹೆಸರನ್ನು ಕಾಣಿಸದೇ ಇರುವುದಕ್ಕೆ ಅವಕಾಶ ಇರಬೇಕು. ಏಕೆಂದರೆ ಆ ವಂತಿಗೆಗಳನ್ನು ಚೆಕ್‌ಗಳ ಮೂಲಕವೇ ಮಾಡಿರುವುದರಿಂದ ವಿಷಯ ಸ್ಪಷ್ಟವಾಗಿಯೇ ಇರುತ್ತದೆ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಗಾಂಧೀಜಿ ಮತ್ತು ಬೇರೆ ನಾಯಕರು ಹಣ ಸಂಗ್ರಹವನ್ನು ಬಹಿರಂಗವಾಗಿಯೇ ಮಾಡುವುದರ ಮೂಲಕ ರಾಜಕೀಯ ನಿಧಿ ಸಂಗ್ರಹ ಕಾರ್ಯದಲ್ಲಿ ಪಾರದರ್ಶಕತೆ ಮತ್ತು ನೈತಿಕತೆಯ ಮೌಲ್ಯಗಳನ್ನು ಪ್ರತಿಷ್ಠಾಪಿಸಿದ್ದರು. ಇಂದಿನ ರಾಜಕಾರಣದಲ್ಲಿ ನೀತಿ ಆಧಾರಿತ ಹಣ ಸಂಗ್ರಹಣಾ ಪದ್ಧತಿಯನ್ನು ಏಕೆ ಜಾರಿಗೆ ತರಲು ಸಾಧ್ಯವಿಲ್ಲ?

ಕಪ್ಪುಹಣ ಆಧಾರಿತ ರಾಜಕೀಯ ಹಣ ಸಂಗ್ರಹಣೆಯ ಪದ್ಧತಿಯಿಂದ ನ್ಯಾಯಬದ್ಧ ಪದ್ಧತಿಗೆ ಬದಲಾವಣೆಗೊಳ್ಳುವುದು ಒಂದು ರಾತ್ರಿಯಲ್ಲಿ ಆಗುವ ಕೆಲಸವಲ್ಲ. ಆದರೆ ಅಂಥ ಬದಲಾವಣೆಯ ಪ್ರಕ್ರಿಯೆಯನ್ನು ಪ್ರಾರಂಭಗೊಳಿಸಬೇಕು. ರಾಜಕೀಯ ಪಕ್ಷಗಳಿಗೆ ವಂತಿಗೆ ಕೊಡುವವರು ವಾಣಿಜ್ಯ ಹಾಗೂ ವ್ಯಾಪಾರಿ ಸಂಸ್ಥೆಗಳು. ಈ ಸಂಸ್ಥೆಗಳ ಪ್ರತಿನಿಧಿಗಳು ರಾಜಕೀಯ ಪಕ್ಷಗಳಿಗೆ ಲಂಚಕೊಡುವುದಿಲ್ಲವೆಂಬ ಭರವಸೆಯನ್ನು ಚುನಾವಣಾ ಆಯೋಗಕ್ಕೆ ಕೊಟ್ಟಿದ್ದಾರೆ.

ಭಾರತದ ರಾಜಕೀಯದಲ್ಲಿ ಕೇವಲ ಕಪ್ಪುಹಣದ ಸಮಸ್ಯೆಯೊಂದೇ ಅಲ್ಲ ಇರುವುದು. ಇದರ ಜೊತೆಗೆ ಕಾನೂನನ್ನು ಉಲ್ಲಂಘಿಸುವವರೇ ಕಾನೂನನ್ನು ತಯಾರಿಸುವವರಾಗಿದ್ದಾರೆ. ಭಾರತೀಯ ರಾಜಕೀಯ ಪದ್ಧತಿಯಲ್ಲಿ ಭ್ರಷ್ಟಾಚಾರ ರಹಿತ ಸರ್ಕಾರವನ್ನು ರಚಿಸಲು ಸಾಧ್ಯವೆ? ಇದು ಸಾಧ್ಯವಾಗಬೇಕಾದರೆ ಕಾನೂನನ್ನು ಮಾಡುವವರು ಅದನ್ನು ಉಲ್ಲಂಘಿಸಬಾರದೆಂಬ ಒಂದು ಕನಿಷ್ಟ ಅಗತ್ಯವನ್ನು ಪಾಲಿಸಬೇಕು. ವೊಹ್ರಾ ಆಯೋಗವು ನಮ್ಮ ರಾಜಕಾರಣದ ಈ ಒಂದು ಅಂಶವನ್ನು ಎತ್ತಿತೋರಿಸಿದೆ. ಆದ್ದರಿಂದ ಕಾನೂನನ್ನು ಉಲ್ಲಂಘಿಸುವವರು ಮತ್ತು ಅಪರಾಧಿಗಳು ಕಾನೂನನ್ನು ಮಾಡುವ ಸ್ಥಾನಕ್ಕೆ ಬರದಂತೆ ಕ್ರಮಕೈಗೊಳ್ಳುವುದು ಮೊದಲ ಹೆಜ್ಜೆಯಾಗಿದೆ. ★

(ಮುಂದುವರಿಯುವುದು)

ತುಂಗ-ಭದ್ರೆಯರು ಉಳಿಯುವರೋ, ಅಳಿಯುವರೋ?

ತುಂಗಭದ್ರೆಯ ತೀರದ ಜನರಿಗೆ ಈ ನದಿ ತಾಯಿ ಸಮಾನ. ಪಶ್ಚಿಮ ಘಟ್ಟದ ಕುದುರೆಮುಖ ಶ್ರೇಣಿಯಲ್ಲಿ ಉಗಮವಾಗುವ ತುಂಗಭದ್ರೆ ವರ್ಷಪೂರ್ತಿ ಹರಿದು ಶತಮಾನಗಳಿಂದಲೂ ಈನಾಡಿನ ಮಕ್ಕಳ ಹಸಿವನ್ನು ಇಂಗಿಸುತ್ತಿದ್ದಾಳೆ. ಸ್ವಾತಂತ್ರ್ಯ ಬಂದು ೫೩ ವರ್ಷಗಳ ನಂತರವೂ ಹಳ್ಳಿಹಳ್ಳಿಗಳಿಗೆ ಕನಿಷ್ಟ ಕುಡಿಯುವ ನೀರನ್ನೂ ಒದಗಿಸಲು ಯೋಗ್ಯತೆಯಿಲ್ಲದ ಇಲ್ಲಿನ ಸರ್ಕಾರಗಳು ಪ್ರಕೃತಿದತ್ತ ನೀರಿನ ಆಸರೆಯಾದ ಈ ನದಿಮೂಲಕ್ಕೆ ಸಂಚಕಾರ ತರಲು ಹೊರಟಿರುವುದು ಅತ್ಯಂತ ಆತಂಕಕಾರಿಯಾಗಿದೆ. ೧೯೯೪ ರಲ್ಲಿ ತುಂಗಾ ಮೂಲದ ಗಂಗಡಿಕಲ್ಲು ಗುಡ್ಡದಲ್ಲಿ ಸರ್ಕಾರ ಗಣಿಗಾರಿಕೆ ಪರವಾನಿಗೆ ನೀಡಿದಾಗ ನದಿ ತೀರದ ಜನರೆಲ್ಲಾ ತುಂಗಾ ಮೂಲ ಉಳಿಸಿ ಹೋರಾಟ ಒಕ್ಕೂಟದಡಿ ಒಂದಾಗಿ ಪ್ರತಿಭಟಿಸಿದ ನಂತರ ಜನಾಭಿಪ್ರಾಯಕ್ಕೆ ಮಣಿದ ಸರ್ಕಾರ ಗಣಿಗಾರಿಕೆಯ ಪ್ರಸ್ತಾವನೆಯನ್ನು ಹಿಂದಕ್ಕೆ ಪಡೆದಿತ್ತು.

ಆದರೆ ಜಾಗತೀಕರಣದ ಈ ಸಂದರ್ಭದಲ್ಲಿ ಖಾಸಗೀಕರಣದ ಗಾಳಿ ಬಲವಾಗಿ ಬೀಸುತ್ತಿರುವಾಗ ವಿದೇಶಿ ಕಂಪನಿಗಳ ಹದ್ದಿನ ಕಣ್ಣಿಗೆ ತುಂಗಭದ್ರಾ ಪರ್ವತ ಶ್ರೇಣಿ ಮತ್ತೊಮ್ಮೆ ಗುರಿಯಾಗಿದೆ. ಇದೇ ಡಿ. ೨೩ ರಂದು ನವದೆಹಲಿಯಲ್ಲಿ ಉಕ್ಕುಖಾತೆ ಸಚಿವ ಕೆ. ಕೆ. ತ್ರಿಪಾಠಿ ಅವರು ಹೇಳಿಕೆ ನೀಡಿ ಕುದುರೆಮುಖ ಗಣಿಗಾರಿಕೆ ವಿಸ್ತರಿಸುವ ಸಲುವಾಗಿ ಕೆ.ಐ.ಒ.ಸಿ.ಎಲ್. ಕಂಪನಿಯ ಗಣಿಗಾರಿಕೆಯ ಅವಧಿ ಮುಗಿದಿದ್ದರೂ ಪರವಾನಿಗೆಯನ್ನು ನವೀಕರಿಸಿ ಮತ್ತೆ ೨೦ ವರ್ಷಗಳ ಕಾಲ ಗಣಿಗಾರಿಕೆಗೆ ಅನುಮತಿ ನೀಡಲು ರಾಜ್ಯ ಸರ್ಕಾರ ಒಪ್ಪಿಗೆ ನೀಡಿದೆ ಎಂಬುದನ್ನು ಖಚಿತಪಡಿಸಿದ್ದಾರೆ.

'ಮನೆ ಸುಟ್ಟು ಇದ್ದಿಲು ಮಾರುವ' ಡಬ್ಲ್ಯುಟಿಓ ಒಪ್ಪಂದದಂತೆ ಎಲ್ಲವನ್ನೂ ಖಾಸಗಿಯವರಿಗೆ ಮಾರಲು ಹೊರಟಿರುವ ಸರ್ಕಾರ ಈಗ ಜರ್ಮನ್ ಕನ್ಸಲ್ಟೆನ್ಸಿಯೊಂದಿಗೆ ಕುದುರೆಮುಖ ಅದಿರು ಕಂಪನಿ (ಕೆಐಒಸಿಎಲ್) ಯನ್ನು ಜಪಾನ್‌ನ ದೊಡ್ಡ ಸ್ಟೀಲ್ ಕಂಪನಿಯಾದ ನಿಪ್ಪಾನ್ ಸ್ಟೀಲ್ ಕಂಪನಿಗೆ ಮಾರಲು ಹೊರಟಿದೆ- ಗಣಿಗಾರಿಕೆಯ ಈ ಮಾರಾಟವನ್ನು ಮತ್ತಷ್ಟು ಆಕರ್ಷಕವಾಗಿಸಲು ಈಗಾಗಲೇ ಗಣಿಗಾರಿಕೆ ನಡೆಸುತ್ತಿರುವ ೬,೮೦೦ ಹೆಕ್ಟೇರ್ ಪ್ರದೇಶದಲ್ಲಿ ಆಳ ಗಣಿಗಾರಿಕೆ ಗಂಗಡಿಕಲ್ಲು ಮತ್ತು ನೆಲ್ಲಿಬೀಡುಗಳಿಗೂ ಗಣಿಗಾರಿಕೆಯ ವಿಸ್ತರಣೆ, ಲಕ್ಯಾ ಡ್ಯಾಂನ ಹೂಳಿನಿಂದ ಕಬ್ಬಿಣ ಪರಿಷ್ಕರಣೆ ಮುಂತಾದವನ್ನು ಸೇರಿಸಿ ಗಣಿಗಾರಿಕೆಯ ಅವಧಿಯನ್ನು ೨೦ ವರ್ಷಗಳವರೆಗೆ ನಡೆಸಲು ಎಲ್ಲಾ ಯೋಜನೆಗಳೂ ಸಿದ್ಧವಾಗಿವೆ.

ಕಳೆದ ೩೦ ವರ್ಷಗಳಿಂದ ನಿರಂತರವಾಗಿ ನಮ್ಮ ಸಮೃದ್ಧ ಪರಿಸರವನ್ನು ಬಗೆದು ತೆಗೆದ ಕುದುರೆಮುಖದ ಕಬ್ಬಿಣದ ಅದಿರನ್ನು ಕೆಐಒಸಿಎಲ್ ಶೇ. ೧೦೦ ರಷ್ಟು ವಿದೇಶಗಳಿಗೆ ರಫ್ತು ಮಾಡಿದೆಯೇ ವಿನಃ ಈ ನಾಡಿನ ರೈತನ ನೇಗಿಲ ಕುಳ್ಳಕ್ಕೂ ಒಂದು ತುಂಡು ಕಬ್ಬಿಣ ಉಪಯೋಗವಾಗಿಲ್ಲ. ಅಲ್ಲದೇ ಕಂಪನಿಯು ಈ ಭಾಗದ ಪರಿಸರಕ್ಕೆ, ಸುತ್ತಲಿನ ನದಿಗಳಿಗೆ ಮಾಡಿರುವ ಹಾನಿ ಅಪಾರವಾದದ್ದು. ಆದರ ಕೆಲವು ಮುಖ್ಯಾಂಶಗಳನ್ನು ನೋಡಿ:-

ಭೂಮಿಯ ೧೮ ಮುಖ್ಯ ಜೀವವೈವಿಧ್ಯ ಕೇಂದ್ರಗಳಲ್ಲಿ ಒಂದಾದ ಪಶ್ಚಿಮ ಘಟ್ಟದ ೬,೦೦೦ ಎಕರೆ ಸಮೃದ್ಧ ಅರಣ್ಯ ಪ್ರದೇಶದ ನಾಶ.

ಗಣಿಗಾರಿಕೆಯ ಹೂಳು ತಡೆಯಲು ನಿರ್ಮಿಸಿದ ಲಕ್ಯಾ ಡ್ಯಾಂ ಅನೇಕಸಾರಿ ಒಡೆದಿದ್ದರಿಂದ ಇದುವರೆಗೆ ೪೦ ಕ್ಕೂ ಹೆಚ್ಚು ಜನ ಸಾವಿಗೀಡಾಗಿದ್ದಾರೆ.

ಗಣಿಗಾರಿಕೆಯ ಹೂಳಿನಿಂದಾಗಿ ಭದ್ರಾ ನದಿಯು ಸಂಪೂರ್ಣವಾಗಿ ಕಲುಷಿತವಾಗಿದ್ದು, ಕುದುರೆಮುಖದ ಪಕ್ಕದಲ್ಲಿರುವ ಕಳಸ ಪಟ್ಟಣದಲ್ಲೇ ನದಿ ನೀರು ಕುಡಿಯಲು ಅಯೋಗ್ಯವೆಂದು ತಜ್ಞರು ಹೇಳಿದ್ದಾರೆ.

ಭದ್ರಾ ನದಿಯಲ್ಲಿ ಹೂಳಿನಿಂದಾಗಿ ಪ್ರವಾಹ ಹೆಚ್ಚಾಗಿ ಸುತ್ತಲಿನ ಅಡಿಕೆ–ಗದ್ದೆ ತೋಟಗಳು ಬಂಜರಾಗಿ ರೈತರು ಕಂಗಾಲಾಗಿದ್ದಾರೆ.

ಭೂಕಂಪಗಳಿಂದ ಸುರಕ್ಷಿತವಾಗಿದ್ದ ಈ ಪ್ರದೇಶವು ಗಣಿಗಾರಿಕೆಗಾಗಿ ಸಿಡಿಸುವ ಸ್ಫೋಟಕಗಳಿಂದಾಗಿ ೧೯೯೮ ರ ಜೂನ್‌ನಲ್ಲಿ ಸರಣಿ ಭೂಕಂಪದ ಅಪಾಯಕ್ಕೆ ಒಳಗಾಗಿದ್ದು ಇನ್ನೊಮ್ಮೆ ಭೂಕಂಪವಾದರೆ ಸರ್ವನಾಶವಾದೀತೆಂದು ತಜ್ಞರು ಎಚ್ಚರಿಸಿದ್ದಾರೆ.

ಕರ್ನಾಟಕ ಹಾಗೂ ಆಂಧ್ರದ ೧೫ ಲಕ್ಷ ಎಕರೆ ಭೂಮಿಗೆ ನೇರ ನೀರಾವರಿ ಸೌಕರ್ಯ ಕಲ್ಪಿಸಿರುವ ಗಾಜನೂರು, ಭದ್ರಾ ಮತ್ತು ತುಂಗಭದ್ರಾ ಅಣೆಕಟ್ಟುಗಳಲ್ಲಿ ಗಣಿಗಾರಿಕೆಯ ಹೂಳಿನಿಂದಾಗಿ ನೀರಿನ ಶೇಖರಣಾ ಸಾಮರ್ಥ್ಯ ಕುಗ್ಗಿದ್ದು ಚಾನಲ್‌ಗಳ ಟೇಲೆಂಡ್ ರೈತರಿಗೆ ಈಗಲೇ ನೀರಿಲ್ಲದ ಅವರ ಭೂಮಿ ಬಂಜರಾಗುತ್ತಿದೆ.

ಗಣಿಗಾರಿಕೆಯಿಂದಾಗಿ ಅರಣ್ಯ ನಾಶವಾದ ಕಾರಣ ಭೂಮಿಯ ಮೇಲ್ಮಣ್ಣು ಕೊಚ್ಚಿಹೋಗಿ ನದಿಯನ್ನು ಸೇರುತ್ತಿರುವುದರಿಂದ ಈ ಜಲಾಶಯಗಳು ತಮ್ಮ ಸಂಗ್ರಹಣಾ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿವೆ. ಹೊಸಪೇಟೆಯ ಅಣೆಕಟ್ಟಿನಲ್ಲಿ ಈಗಾಗಲೇ ೧/೩ ಭಾಗದಷ್ಟು ಹೂಳು ತುಂಬಿದೆ ಎಂದು ಇಂಜಿನಿಯರ್‌ಗಳು ಆತಂಕ ವ್ಯಕ್ತಪಡಿಸಿದ್ದಾರೆ. ಇದುವರೆಗೂ ನಮ್ಮಲ್ಲಿ ಹೂಳೆತ್ತುವ ಯಾವ

ತಂತ್ರಜ್ಞಾನವೂ ಬಂದಿಲ್ಲ. ಆದ್ದರಿಂದ ಪರಿಸ್ಥಿತಿ ಹೀಗೇ ಮುಂದುವರಿದರೆ ರೈತರು, ಕಾರ್ಮಿಕರು, ವ್ಯಾಪಾರಿಗಳು ಬೀದಿ ಪಾಲಾಗುವ ದಿನ ದೂರವಿಲ್ಲ.

ಇಲ್ಲಿನ ಶೋಲಾ ಕಾಡುಗಳ ಹುಲ್ಲುಗಾವಲಿನ ಜೀವವೈವಿಧ್ಯತೆಯನ್ನು ಕಡೆಗಣಿಸಿ ಬಂಜರು ಭೂಮಿಯೆಂದು ದಾಖಲೆಗಳಲ್ಲಿ ತೋರಿಸಿ ಮಾಧ್ಯಮಗಳನ್ನು ಮೋಸಗೊಳಿಸಲಾಗಿದೆ. ಅಳಿವಿನಂಚಿನಲ್ಲಿರುವ ಸಿಂಗಲಿಕ ಸೇರಿದಂತೆ ಅನೇಕ ಜೀವಿಗಳು , ಬಲಿಗೆ ಮರದಂತಹ ಸಸ್ಯ ಪ್ರಬೇಧಗಳು, ಮಾಷೀರ್ ಜಾತಿಗೆ ಸೇರಿದ ಮೀನು ಸೇರಿದಂತೆ ಅನೇಕ ಅಪರೂಪದ ಮೀನುಗಳು ಈ ಗಣಿಗಾರಿಕೆಯಿಂದ ಆಪತ್ತನ್ನು ಎದುರಿಸುತ್ತಿವೆ.

ಕಳೆದ ಜೂನ್‌ನಲ್ಲಿ ಕಂಪನಿಯ ಅದಿರು ಸಾಗಾಣಿಕೆಯ ಪೈಪ್‌ಲೈನ್ ಸೋರಿಕೆಯಿಂದ ಹತ್ತಿರದ ಅರಣ್ಯ ಪ್ರದೇಶ ಮತ್ತು ಎಣ್ಣೆ ಹೊಳೆಗೆ ಕಬ್ಬಿಣದ ಸ್ಲರಿ ರಾಡಿಯಾಗಿ ಹರಿದು ಸುತ್ತಲಿನ ಜಮೀನುಗಳಿಗೆ ಅಪಾರ ಹಾನಿಯುಂಟು ಮಾಡಿದ್ದನ್ನು ಪತ್ರಿಕೆಗಳು ವಿವರವಾಗಿ ಪ್ರಕಟಿಸಿವೆ.

ಗಣಿಗಾರಿಕೆಯಿಂದಾಗಿ ಮಳೆಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಗಣನೀಯವಾಗಿ ಕಡಿಮೆಯಾಗಿದೆ.

ಹೀಗೆ ತನ್ನ ಉಗಮ ಸ್ಥಾನದಲ್ಲೇ ಅಪಾಯಕ್ಕೆ ಒಳಗಾದ ತುಂಗ-ಭದ್ರ ನದಿಗಳು ಹಾದಿಯುದ್ದಕ್ಕೂ ಅನೇಕ ರೀತಿಯ ಮಾಲಿನ್ಯಕ್ಕೆ ತುತ್ತಾಗಿವೆ. ಭದ್ರಾವತಿಯ ಎಂಪಿಎಂ ಮತ್ತು ವಿಐಎಸ್ ಎಲ್ ಕಾರ್ಖಾನೆಗಳು ಭದ್ರೆಯನ್ನು ಹೊಲಸು ಚರಂಡಿ ಮಾಡಿವೆ. ಹರಿಹರ ಪಾಲಿ ಫೈಬರ್ಸ್ ಕಂಪನಿಯಂತೂ ನದಿಗೆ ನೇರ ವಿಷಪ್ರಾಶನ ಮಾಡಿಸುತ್ತಿದೆ. ಅಲ್ಲದೇ ಜಲಾನಯನ ಪ್ರದೇಶ ದುದ್ದಕ್ಕೂ ಹೆಚ್ಚುತ್ತಿರುವ ಅರಣ್ಯನಾಶವು ಅನೇಕ ಜಲಮೂಲಗಳನ್ನು ಬತ್ತಿಸಿವೆ.

ಕುದುರೆಮುಖ ಗಣಿಗಾರಿಕೆಯು ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯಲ್ಲಿ ಬಂದರೂ ಅದನ್ನು ಸರ್ಕಾರ ಡೀನೋಟಿಫೈ ಮಾಡಿ ವಿದೇಶಿಯರಿಗೆ ಮಾರಲು ಹೊರಟಿದೆ. ತಲೆತಲಾಂತರದಿಂದ ಇಲ್ಲೇ ಹುಟ್ಟಿ ಬೆಳೆದ ಅಲ್ಲಿನ ರೈತ ಗಿರಿಜನರನ್ನು ಒಕ್ಕಲೆಬ್ಬಿಸಲು ಎಲ್ಲಾ ಸಿದ್ಧತೆನಡೆದಿದೆ. ಅಂದರೆ ಈ ಸರ್ಕಾರಗಳು ಸ್ಥಳೀಯ ಜನರ ಬದುಕುವ ಹಕ್ಕನ್ನೂ ನಿರಾಕರಿಸಿ ವಿದೇಶಿಯರಿಗೆ ಮಣೆ ಹಾಕುವ ದಲ್ಲಾಳಿಯಂತೆ ವರ್ತಿಸುತ್ತಿರುವುದು ಪ್ರಜಾಪ್ರಭುತ್ವದ ಹೇಯಕೃತ್ಯವಾಗಿದೆ. ಆದ್ದರಿಂದ ಕುದುರೆಮುಖ ರಾಷ್ಟ್ರೀಯ ಉದ್ಯಾನ ಯೋಜನೆ ರದ್ದಾಗಲೇಬೇಕು.

ಸರ್ಕಾರ ಇಷ್ಟೆಲ್ಲಾ ಅನಾಹುತಗಳ ನಡುವೆ ನಡೆಸುತ್ತಿರುವ ಈ ಗಣಿಗಾರಿಕೆಯಿಂದ ಬರುವ ಏಕೈಕ ಲಾಭವೆಂದರೆ (ಸರ್ಕಾರಿ ನಾಲಗೆಯಲ್ಲಿ) ಡಾಲರ್

ನೆಳಿಕೆ – ವಿದೇಶಿ ವಿನಿಮಯ. ತುಂಗಭದ್ರಾ ನದಿಯು ಕರ್ನಾಟಕದಲ್ಲೇ ೧೫ ಲಕ್ಷ ಎಕರೆ ಭೂಮಿಗೆ ನೇರ ನೀರಾವರಿ ಸೌಲಭ್ಯ ಕಲ್ಪಿಸುತ್ತಿದೆ. ಅಲ್ಲದೆ ಗರೆಯ ಆಂಧ್ರಪ್ರದೇಶದಲ್ಲೂ ಲಕ್ಷಾಂತರ ಎಕರೆ ಭೂಮಿಗೆ ತುಂಗಭದ್ರೆಯ ನೀರೇ ಆಸರೆಯಾಗಿದೆ. ನದಿ ತಟದಲ್ಲಿ ಬೆಳವ ಭತ್ತ, ಕಬ್ಬು, ಅಡಿಕೆ, ಕಾಫಿ. ಟೀ, ಏಲಕ್ಕಿ ಕಾಳುಮೆಣಸು ಇವು ತಂದುಕೊಡುವ ವಿದೇಶಿ ವಿನಿಮಯ ಎಷ್ಟು? ಸರ್ಕಾರಿ ಲೆಕ್ಕದ ಪ್ರಕಾರ ಒಂದು ಎಕರೆ ನೀರಾವರಿಯನ್ನು ಆಶ್ರಯಿಸಿ ಐದು ಮಂದಿ ಬದುಕಬಹುದಾದರೆ ಕನಿಷ್ಠ ೭೦-೮೦ ಲಕ್ಷ ಜನ ನದಿಯನ್ನೇ ಆಶ್ರಯಿಸಿ ಬದುಕುವರೆಂದಾಯಿತು. ಇನ್ನು ಇದರ ಸುತ್ತ ನಡೆಯುವ ವ್ಯಾಪಾರ, ವಾಣಿಜ್ಯ, ಕೈಗಾರಿಕೆಗಳು ಒಟ್ಟಾರೆ ಜನಜೀವನಕ್ಕೆ ನೀಡುವ ಆಧಾರ ಯಾವ ಕಾರ್ಖಾನೆಯೂ ನೀಡಲಾರದು. ತುಂಗಭದ್ರ ಪ್ರಕೃತಿಯೇ ನಿರ್ಮಿಸಿದ ಜೀವಂತ ಕಾರ್ಖಾನೆ. ಯಾವ ಡಾಲರ್‌ನಿಂದಲೂ ಇದರ ಬೆಲೆ ಕಟ್ಟಲಾಗದು. ಸರ್ಕಾರ ಕೆಐಓಸಿಎಲ್ ಕಾರ್ಮಿಕರ ಪ್ರಶ್ನೆಯನ್ನು ಮುಂದಿಟ್ಟು ನಾಟಕವಾಡುವ ಬದಲು ಗಣಿಗಾರಿಕೆ ನಿಲ್ಲಿಸಿ ಕಾರ್ಮಿಕರಿಗೆ ಪರ್ಯಾಯ ಉದ್ಯೋಗಾವಕಾಶ ಕಲ್ಪಿಸಬೇಕು.

ನಮ್ಮೆಲ್ಲರ ಜೀವನಾಡಿಯಾದ ತುಂಗ – ಭದ್ರೆಯ ನಾಶವೆಂದರೆ ಈ ನಾಡಿನ ಸರ್ವನಾಶವೇ ಸರಿ. ಹೀಗೆ ಕಳೆದ ೩೨ ವರ್ಷಗಳಿಂದ ನಮ್ಮ ನಾಡಿನ ಅಮೂಲ್ಯ ಭೂಗರ್ಭವನ್ನು ಬಗೆದು ಸಾಮ್ರಾಜ್ಯಶಾಹಿಗಳ ಹೊಟ್ಟೆತುಂಬಿಸಿದ ಈ ಜನವಿರೋಧಿ ಯೋಜನೆಯನ್ನು ಈ ಕೂಡಲೇ ನಿಲ್ಲಿಸದಿದ್ದರೆ ಧರೆ ಹತ್ತಿ ಉರಿದೀತು, ಒಲೆ ಹತ್ತಿ ಉರಿದೊಡೆ ನಿಲ್ಲಬಹುದಲ್ಲದೇ, ಧರೆ ಹತ್ತಿ ಉರಿದೊಡೆ ನಿಲ್ಲಬಹುದೆ? ಆದ್ದರಿಂದ ಕಳೆದ ವರ್ಷವೇ ತನ್ನ ಲೈಸನ್ಸ್ ಅವಧಿ ಮುಗಿಸಿದ ಕೆಐಓಸಿಎಲ್ ಕಂಪನಿಗೆ ಒಂದು ವರ್ಷ ವಿಸ್ತರಣಾ ಲೆಸನ್ಸ್ ಕೊಟ್ಟಿರುವುದೇ ಸರ್ಕಾರದ ಜನದ್ರೋಹವಾಗಿದೆ. ಆದರೆ ಈಗ ಮತ್ತೆ ಅದನ್ನು ೨೦ ವರ್ಷಗಳಿಗೆ ವಿಸ್ತರಿಸುವ ಸಂಚು ನಡೆದಿದೆ. ೧೯೯೪ ರಿಂದಲೂ ನದಿ ಪಾತ್ರದ ಎಲ್ಲಾ ಜಿಲ್ಲೆಗಳ ಜನತೆ ಗಣಿಗಾರಿಕೆ ರದ್ದು ಮಾಡುವಂತೆ ಒತ್ತಾಯಿಸಿ ನಿರಂತರ ಪ್ರತಿಭಟನೆ ಮಾಡುತ್ತಲೇ ಇದ್ದರೂ, ಸರ್ಕಾರ ಪಂಚೇಂದ್ರಿಯಗಳನ್ನು ಬಂದ್ ಮಾಡಿ ಕುಳಿತಿದೆ. ಆದ್ದರಿಂದ ತುಂಗ – ಭದ್ರೆಯ ಉಳಿವಿಗೆ ಗಂಡಾಂತರಕಾರಿಯಾಗಲಿರು ಈ ಯೋಜನೆಯ ವಿರುದ್ಧ ನಾಡಪ್ರೇಮಿಗಳು, ಪರಿಸರ ಪ್ರೇಮಿಗಳು ಬಲವಾದ ಹೋರಾಟ ಕಟ್ಟಬೇಕಿದೆ. ★

ತುಂಗ-ಭದ್ರ ಉಳಿಸಿ ಹೋರಾಟ ಒಕ್ಕೂಟ

೭ ನೇ ಪುಟದಿಂದ

ಸಮಾಜದ ಹಿತವನ್ನು ಕಡೆಗಣಿಸುತ್ತಿರುವಾಗ ಪ್ರಪಂಚದ ಮುಂದೇ ಒಂದೇ ಒಂದು ಅದ್ವಿತೀಯ ತತ್ವ ಯಾವುದಾದರೂ ಇದ್ದರೆ ಅದು ಗಾಂಧೀಜಿಯವರಿಂದ ಪ್ರತಿಪಾದಿತವಾದ ಸರ್ವೋದಯ ವಿಚಾರವೊಂದೇ. ಇದು ನಿಜವೆಂದು ವಿಶ್ವದ ನೋಬಲ್ ಬಹುಮಾನ ವಿಜೇತರೆಲ್ಲರೂ ಘೋಷಿಸಿದ್ದಾರೆ.

ಸರ್ವೋದಯ ಸಿದ್ಧಾಂತ ಜಗತ್ತಿನ ಮುಂದೆ ಪ್ರಬಲವಾಗಿ ಮೂಡಿಬರುವ ಲಕ್ಷಣಗಳು ಕಾರ್ಮುಗಿಲಿನಲ್ಲಿ ಹೊಳೆ-ಹೊಳೆದು ಹೋಗುವ ಮಿಂಚಿನಂತೆ ಆಗಾಗ್ಗ ಕಾಣಿಸಿಕೊಳ್ಳುತ್ತಿವೆ. ವಿಜ್ಞಾನ ವಿನಾಶದ ಕಡೆಗೆ ಹೋದಷ್ಟೂ, ಅತಿಯಾದ ಕೈಗಾರೀಕರಣ ಆದಷ್ಟೂ, ನಗರಗಳ ಜೀವನ ಅಸಹನೀಯವಾದಷ್ಟೂ, ನಿರುದ್ಯೋಗ ಸಮಸ್ಯೆ ಉಲ್ಬಣಗೊಂಡಷ್ಟೂ, ತತ್ವರಹಿತ ರಾಜಕಾರಣ ಹೆಚ್ಚಿದಷ್ಟೂ ಸರ್ವೋದಯದ ಬೇರು ಸಮಾಜದಲ್ಲಿ ಆಳವಾಗಿ ಇಳಿಯುತ್ತ ಹೋಗುವ ಲಕ್ಷಣಗಳು ಕಾಣಬರುತ್ತಿವೆ. ಅಂದಮೇಲೆ ಜನವರಿ ೩೦ ನೀರಸವಾದ ಸರ್ವೋದಯ ದಿನವಾಗಿ ಆಚರಿಸಲ್ಪಡುವ ಬದಲು ಶ್ರೀಸಾಮಾನ್ಯರೆಲ್ಲೂ ಒಕ್ಕೊರಲಿನಿಂದ ಸರ್ವೋದಯಕ್ಕೆ ಜಯಕಾರ ಹೇಳುವ, ಸರ್ವೋದಯಕ್ಕಾಗಿ ತಮ್ಮನ್ನು ಅರ್ಪಿಸಿಕೊಳ್ಳುವ ದಿನವಾಗಿ ಪರಿಣಮಿಸವುದು ಅಗತ್ಯವಾಗುತ್ತದೆ. ★

☼ ☼ ☼

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ.

★

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ. ಅವುಗಳನ್ನು ಪ್ರಕಟಿಸಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುಮತಿ ಪಡೆದ ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳಹಿಸಬೇಕಾಗಿ ಕೋರಿದೆ.



KA-SK-MND-470/2000

ತೆರೆದ-ಅಂಚೆ

To

ಜನಪದ ಸೇವಾ ಟ್ರಸ್ಟ್ ಪರವಾಗಿ ಸುರೇಂದ್ರ ಕೌಲಗಿ ಅವರಿಂದ ಜನಪದ
ಸೇವಾ ಟ್ರಸ್ಟ್ ಮುದ್ರಣಾಲಯ ಮೇಲುಕೋಟೆಯಲ್ಲಿ ಸಂಪಾದಿತವಾಗಿ,
ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.